ಬೆಲೆ ರೂ.2.50
D.O.P - 15th of every month at Udupi Sorting Office


ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಶ್ರೀ ಶಾರದಾ

ಮಾಸಪತ್ರಿಕೆ – 15 ಮಾರ್ಚ್ 2018

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-18 ಸಂಚಿಕೆ-3 ಪುಟಗಳು-10 Registered Under No.UDP/1260/2018-2020 Licenced to Post without Prepayment WPP No. SK/WPP/UDP/81/15-17

## ಶಿವರಾತ್ರಿಯಂದು ಶಿವಭಜನೋತ್ಸವ





ತಾ.13–02–2018 ಮಹಾಶಿವರಾತ್ರಿಯ ದಿನ. ಸ್ಥಾನಿಕ ಬ್ರಾಹ್ಮಣ ಸಂಘವು ಮಹಾಶಿವರಾತ್ರಿಯನ್ನು ಶ್ರೀ ಶಾರದಾ ಮಂಟಪದಲ್ಲಿ ಶಿವಭಕ್ತಿಗೀತೆಗಳ ಭಜನಾ ಮಹೋತ್ಸವವನ್ನು ನಡೆಸುವುದರ ಮೂಲಕ ಪ್ರತೀವರ್ಷವೂ ಭಕ್ತಿಪೂರ್ವಕವಾಗಿ ಆಚರಿಸುತ್ತಾ ಬಂದಿದೆ. ಕಳೆದ ವರ್ಷದಂತೆ ಈ ವರ್ಷವೂ ಉಡುಪಿ ಹಾಗೂ ಪಡುಬಿದ್ರೆಯ ಮಹಿಳಾವೇದಿಕೆಯ ಸದಸ್ಯರು ಶ್ರೀ ಶಾರದಾ ಮಂಟಪದಲ್ಲಿ ಭಜನಾಮಹೋತ್ಸವವನ್ನು ಅದ್ಭುತವಾಗಿ ನೆರವೇರಿಸಿಕೊಟ್ಟರು.

ಅಂದು ಮುಂಜಾನೆ ಶ್ರೀ ಶಾರದಾ ದೇವಸ್ಥಾನದಲ್ಲಿ ಸಂಕಲ್ಪ, ಪ್ರಾರ್ಥನೆಯ ಬಳಿಕ ಗಣಹೋಮ, ರುದ್ರಾಭಿಷೇಕ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸಲಾಯಿತು. ನಂತರ ಸ್ವಾಧ್ಯಾಯ ತಂಡದವರು ರುದ್ರಪಾರಾಯಣ ಹಾಗೂ ಶಿವಸಹಸ್ರನಾಮ ಪಾರಾಯಣವನ್ನು ಮಾಡಿದರು. ಈ ಕಾರ್ಯಕ್ರಮದ ನಂತರ ಸುಮಾರು ಹತ್ತು ಗಂಟೆಗೆ ಶ್ರೀಶಾರದಾ ಮಂಟಪದಲ್ಲಿ ಶಿವಭಕ್ತಿಗೀತೆಗಳ ಭಜನಾ ಕಾರ್ಯಕ್ರಮವು ಆರಂಭವಾಯಿತು. ಪಡುಬಿದ್ರೆ ಸಂಘದ ಮಹಿಳಾ ವಿಭಾಗದಿಂದ ಮತ್ತು ಉಡುಪಿ ಸಂಘದ ಮಹಿಳಾ ವೇದಿಕೆಯವರಿಂದ ಭಜನಾ ಕಾರ್ಯಕ್ರಮವು ನಡೆಯಿತು. ಎರಡು ತಂಡಗಳು ಐವತ್ತಕ್ಕೂ ಮಿಕ್ಕಿ ಶಿವಭಕ್ತಿಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು. ಭಾಗವಹಿಸಿದ ಎಲ್ಲಾ ಮಹಿಳೆಯರಿಗೆ ಭಕ್ತರೋರ್ವರು ನೀಡಿದ ಶಾಲುಗಳನ್ನು ಹೊದಿಸಿ ಸನ್ಮಾನಿಸಲಾಯಿತು.

ಸುಮಾರು 12 ಗಂಟೆಗೆ ಭಜನಾ ಕಾರ್ಯಕ್ರಮ ಮುಕ್ತಾಯವಾಯಿತು. ನಂತರ ದೇವಸ್ಥಾನದಲ್ಲಿ ಮಂಗಳಾರತಿ ಮಹಾಪೂಜೆ ಸಂಪನ್ನವಾಯಿತು. ಬ್ರಹ್ಮಶ್ರೀ ಸುಬ್ರಹ್ಮಣ್ಯ ಉಪಾಧ್ಯಾಯರು ಹಾಗೂ ಶ್ರೀ ಧರಣೀಶ ಭಟ್ಟರು ಧಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸಿದರು. ಫಲಾಹಾರ ಪ್ರಸಾದದೊಂದಿಗೆ ಶಿವರಾತ್ರಿಯ ಕಾರ್ಯಕ್ರಮಗಳು ಮುಕ್ತಾಯಗೊಂಡವು.

ಎಲ್ಲಾ ಸಮಾಜ ಬಾಂಧವರಿಗೆ ಚಾಂದ್ರಮಾನ ಯುಗಾದಿ ಮತ್ತು ಸೌರಮಾನ ಯುಗಾದಿಗಳ ಶುಭಾಶಯಗಳು.
ವಿಳಂಬಿ ಸಂವತ್ಸರವು ಸರ್ವರಿಗೂ ಸಮೃದ್ಧಿಯನ್ನು ತರಲಿ ಎಂದು ಹಾರೈಸುತ್ತೇವೆ.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)

ಶ್ರೀ ಶಾರದಾ ಮಂಟಪ, ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ-2.



ಪ್ರಿಯರೇ,

ಕುಂಜಿಬೆಟ್ಟು ಶ್ರೀಶಾರದಾ ದೇವಸ್ಥಾನದಲ್ಲಿ

**ಶ್ರೀ ಶಂಕರ ಜಯಂತಿ ಆಚರಣೆಯು**

ತಾ.20-04-2018ನೇ ಶುಕ್ರವಾರ ನೆರವೇರಲಿದೆ.

ಆ ಪ್ರಯುಕ್ತ ಅದೇ ದಿನ ಬೆಳಿಗ್ಗೆ **ಸಾಮೂಹಿಕ ಉಪನಯನ**ವು ನಡೆಯಲಿದೆ.

ಸರ್ವರಿಗೂ ಆದರದ ಸ್ವಾಗತ :

– ಆಡಳಿತ ಮಂಡಳಿ

ಸಾಮೂಹಿಕ ಉಪನಯನದಲ್ಲಿ ಪಾಲ್ಗೊಳ್ಳಲಿರುವ ಆಸಕ್ತ ಸಮಾಜ ಬಾಂಧವರು ವಟುಗಳ ವಿವರಗಳನ್ನು ತಾ.15-4-2017ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್/ಕಾರ್ಯದರ್ಶಿಯವರಿಗೆ (0820-2520754) ತಿಳಿಸಲು ವಿನಂತಿಸಲಾಗಿದೆ.

**ಕಾರ್ಯಕ್ರಮಗಳ ವಿವರ :** ಬೆಳಿಗ್ಗೆ 8-00 ಗಂಟೆಗೆ ಪ್ರಾರ್ಥನೆ, ರುದ್ರಾಭಿಷೇಕ, ಪಾರಾಯಣ, ಉಪನಯನ, ಶ್ರೀ ಶಂಕರಾಚಾರ್ಯರ ಮೂರ್ತಿಗೆ ಅಭಿಷೇಕ ಹಾಗೂ ಪೂಜೆ, ಬೆಳಿಗ್ಗೆ 11 ಗಂಟೆಗೆ ಉಪನ್ಯಾಸ ಕಾರ್ಯಕ್ರಮ ಮತ್ತು ಮಧ್ಯಾಹ್ನ 12-30ಕ್ಕೆ ಅನ್ನಸಂತರ್ಪಣೆ ನಡೆಯಲಿದೆ.

## ಶ್ರೀಶಾರದಾ ದೇವಸ್ಥಾನ

ಶ್ರೀ ಶಾರದಾ ಮಂಟಪ, ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ-2.



ಪ್ರಿಯರೇ,

ಸ್ವಸ್ತಿ ಶ್ರೀ ವಿಳಂಬಿ ನಾಮ ಸಂ।ರದ
ಚೈತ್ರ ಶುಕ್ಲ 1ಯು ತಾ.18-03-2018ನೇ ರವಿವಾರದಿಂದ
ಚೈತ್ರ ಶುಕ್ಲ 9ಯು ತಾ.25-03-2018ನೇ ರವಿವಾರದ ತನಕ

**ಕಿರುನವರಾತ್ರಿ ಉತ್ಸವವು** ಜರಗಲಿರುವುದು.

ಈ ಪ್ರಯುಕ್ತ ಪ್ರತಿದಿನ ಸಂಜೆ ದೇವಿಗೆ ವಿಶೇಷ ಪೂಜೆ ನೆರವೇರಲಿದೆ.

**ತಾ.25-03-2018ನೇ ರವಿವಾರ ಸಂಜೆ ಗಂಟೆ 5-00ರಿಂದ**

**ಸಾಮೂಹಿಕ ಶ್ರೀದುರ್ಗಾನಮಸ್ಕಾರ ಪೂಜೆಯು**

ನೆರವೇರಲಿದೆ. ಪಾಲ್ಗೊಳ್ಳಲಿರುವ ಭಕ್ತಾದಿಗಳು ಸೇವಾ ರೂಪದಲ್ಲಿ ಪೂಜೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ದುರ್ಗಾಮಾತೆಗೆ ಅರ್ಪಿಸಲು ಹಣ್ಣು, ಹೂವು ಇತ್ಯಾದಿಗಳನ್ನು ಪೂಜಾರಂಭಕ್ಕೆ ಮೊದಲು ತಂದು ನೀಡಬಹುದು. ಅಪರಾಹ್ನ 3ರಿಂದ ದೀಪವಿಟ್ಟು ಮಂಡಲ ರಚನೆ, ಸಂಜೆ 5 ರಿಂದ ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ, ಭಕ್ತರು ಹಾಗೂ ಋತ್ವಿಜರಿಂದ ಸಪ್ತಶತಿ ಪಾರಾಯಣ, ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ, ಪುಷ್ಪಾಂಜಲಿ ನಮಸ್ಕಾರ, ಮಹಾಪೂಜೆ, ತೀರ್ಥಪ್ರಸಾದ ವಿತರಣೆ, ಭೋಜನ ಪ್ರಸಾದ ವಿಧಿಗಳು ನಡೆಯಲಿವೆ. ಸೇವಾ ಶುಲ್ಕ ರೂ.150/-

– ಆಡಳಿತ ಮಂಡಳಿ

*Power Cut !!!???*
*Install Best Quality Inverters...*
Mobile : 9483242111
K.Suresh Rao : 9036443884
Tel : 0820-2523436



DEEPA ENTERPRISES
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging


ಡಾ। ಸಂಜಾತ ಪಿ. ಎಸ್.
B.D.S., MBA (HCS)
ಡೆಂಟಲ್ ಸರ್ಜನ್
ಬೆಳ್ಳೆ ಡೆಂಟಲ್ ಕೇರ್
(ಎಕ್ಸ್‌ರೇ ವ್ಯವಸ್ಥೆಯೊಂದಿಗೆ)
ಫರ್ನ್ಸ್ ಕಾಂಪ್ಲೆಕ್ಸ್,
ಬೆಳ್ಳೆ ಪಂಚಾಯತ್ ಎದುರು, ಮೂಡುಬೆಳ್ಳೆ
ಮೊಬೈಲ್. : 9449419097, 9448523635


# ಸಂಪಾದಕೀಯ.....

– ಡಾ। ವೈ. ಸುದರ್ಶನ್ ರಾವ್

ಇತ್ತೀಚಿಗೆ ಹಿಂದೂ ದೇವಸ್ಥಾನಗಳನ್ನು ಹಾಗೂ ಹಿಂದೂ ಧಾರ್ಮಿಕ ಸಂಸ್ಥೆಗಳನ್ನು ಸರಕಾರದ ಸುಪರ್ಧಿಗೊಳಪಡಿಸಲು ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸುವ ಬಗ್ಗೆ ಕರ್ನಾಟಕ ಸರ್ಕಾರದಿಂದ ಸುತ್ತೋಲೆ ಹೊರಬಿದ್ದು ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾದದ್ದೂ, ಸದ್ಯದಲ್ಲೇ ಚುನಾವಣೆಯನ್ನು ಎದುರಿಸಬೇಕಾದ ಸಂದರ್ಭದಲ್ಲಿ ಇಂತಹಾ ಪ್ರಚೋದನಕಾರಿ ಸುತ್ತೋಲೆಯೊಂದು ಮಂತ್ರಿಗಳ ಗಮನಕ್ಕೆ ಬಾರದೇ ಹೊರಬಿದ್ದದ್ದೂ, ಮುಖ್ಯಮಂತ್ರಿಗಳು ಅರೆಗಳಿಗೆಯಲ್ಲೇ ಈ ಸುತ್ತೋಲೆಯನ್ನು ಹಿಂಪಡೆದದ್ದೂ ನೆನಪಿದೆಯಲ್ಲವೇ? ಆ ಸುತ್ತೋಲೆ ಕಳುಹಿಸಿದ ಅಧಿಕಾರಿಯ ಕಥೆಯೇನಾಗಿದೆಯೋ ದೇವನೇ ಬಲ್ಲ, ಈ ಹಿನ್ನೆಲೆಯಲ್ಲಿ ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಚಾರಿಟೇಬಲ್ ಸಂಸ್ಥೆಗಳ ಕಾಯ್ದೆಯ ಒಳಿತು ಕೆಡುಕುಗಳ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನವಿದು.

ಹಿಂದೂ ಧಾರ್ಮಿಕ ಸಂಸ್ಥೆಗಳನ್ನು ಸರಕಾರದ ಸುಪರ್ಧಿಗೆ ತರುವ ಕಾಯ್ದೆಗಳು 1927ನೇಇಸವಿಯಷ್ಟು ಹಳತು. ಮೈಸೂರು ಮಹಾರಾಜರ ಹಿಂದೂ ಧಾರ್ಮಿಕ ಸಂಸ್ಥೆಗಳ ಕಾಯಿದೆಯು ಇವುಗಳಲ್ಲಿ ಮೊತ್ತಮೊದಲ ಕಾಯಿದೆ. ಸ್ವಾತಂತ್ರ್ಯಪೂರ್ವದ ಮುಂಬಯಿ ಸರಕಾರ, ಮದ್ರಾಸು ಸರಕಾರ, ಹೈದರಾಬಾದ್ ಸರಕಾರ, ಸ್ವಾತಂತ್ರ್ಯನಂತರ ಅಸ್ತಿತ್ವಕ್ಕೆ ಬಂದ ಕರ್ನಾಟಕ ಸರಕಾರ ಹೀಗೆ ಅನೇಕ ಸರ್ಕಾರಗಳು ಕಾಯ್ದೆಗಳನ್ನು ತಂದು ಹಿಂದೂ ಧಾರ್ಮಿಕ ಸಂಸ್ಥೆಗಳನ್ನು ಸರಕಾರದ ಅಧೀನಕ್ಕೆ ತರುವ ಪ್ರಯತ್ನವನ್ನು ಮಾಡಿವೆ. ಸದ್ಯದಲ್ಲಿ ಜಾರಿಯಲ್ಲಿರುವುದು 1997ರ ಸಮಗ್ರ ಕಾಯಿದೆ. ಅದರ ವಿರುದ್ಧವಾಗಿ ಅನೇಕ ವ್ಯಾಜ್ಯಗಳು ಹೈಕೋರ್ಟಿನ ಅಂಗಣದಲ್ಲಿ ಬಿದ್ದುಕೊಂಡಿವೆ.

1997ರ ಸಮಗ್ರ ಕಾಯಿದೆಯು ಹಿಂದೂ ಧರ್ಮದ ಧಾರ್ಮಿಕ ಸಂಸ್ಥೆಗಳಿಗೆ ಮಾತ್ರ ಅನ್ವಯವಾಗುತ್ತದೆ. ಈ ಕಾಯಿದೆಯ ಪ್ರಕಾರ, ಈ ಕಾಯಿದೆ ಬರುವ ಪೂರ್ವದಲ್ಲಿ ಇದ್ದ ಹಲವಾರು ಕಾಯಿದೆಗಳ ಮುಖಾಂತರ ಸರಕಾರದ ಅಧೀನದಲ್ಲಿ ಇದ್ದ ಧಾರ್ಮಿಕ ಸಂಸ್ಥೆಗಳು ಹಾಗೂ ಸರಕಾರದ ಅಧೀನದಲ್ಲಿ ಇರದೇ ಇದ್ದರೂ ಸಾರ್ವಜನಕರ ದೇಣಿಗೆಯಿಂದ ಸಂಗ್ರಹವಾಗುವ ಆದಾಯವನ್ನು ಹೊಂದಿರುವಂತಹಾ ಧಾರ್ಮಿಕ ಸಂಸ್ಥೆಗಳು ಈ ಕಾಯ್ದೆಯ ವ್ಯಾಪಿಗೆ ಒಳಪಡುತ್ತವೆ. ಅದಲ್ಲದೇ ಯಾವುದೇ ಧಾರ್ಮಿಕ ಸಂಸ್ಥೆಯಲ್ಲಿ ಅವ್ಯವಹಾರ ನಡೆದಲ್ಲಿ ಆ ಸಂಸ್ಥೆಗೆ ಸರಕಾರವು ಆಡಳಿತಾಧಿಕಾರಿಯನ್ನು ನೇಮಿಸುವ ಅಧಿಕಾರ ಹೊಂದಿದೆ.

ಹಿಂದೂ ಧರ್ಮ ನಮ್ಮ ದೇಶ/ರಾಜ್ಯದ ಜನಸಂಖ್ಯೆಯ ಶೇಖಡಾ 75ರಷ್ಟು ದೊಡ್ಡ ಸಂಖ್ಯೆಯ ಜನರನ್ನು ಹೊಂದಿರುವ ಧರ್ಮ. ನಮ್ಮ ಧರ್ಮದಲ್ಲಿ ನೂರಾರು ದೇವರುಗಳು, ಸಾವಿರಾರು ಜಾತಿಗಳು , ಕಟ್ಟುಪಾಡುಗಳು, ಪ್ರವೇಶ ನಿಶಿದ್ಧ, ಮೇಲು ಕೀಳು ಆಚರಣೆಗಳು, ದೇವದಾಸಿಯಂತಹಾ ಪದ್ಧತಿಗಳು, ಮೂಢನಂಬಿಕೆಗಳು, ವಂಶಪಾರಂಪರ್ಯವಾಗಿ ಹರಿದುಬರುವ ಅಧಿಕಾರ ಇತ್ಯಾದಿಗಳಿಂದ ಹಿಂದೂ ಧಾರ್ಮಿಕ ಸಂಸ್ಥೆಗಳ ವ್ಯವಹಾರವು ಗೋಜಲು ಗೋಜಲಾಗಿದೆ, ಸಂಕೀರ್ಣವಾಗಿದೆ. ಈ ಅರ್ಥವಾಗದ ಗೋಜಲುಗಳನ್ನು ಕೆಲವು ಬುದ್ಧಿವಂತರು(?) ತಮ್ಮ ಸ್ವಹಿತಾಸಕ್ತಿಗಾಗಿ ಬಳಸಿಕೊಳ್ಳುವುದನ್ನು ತಪ್ಪಿಸಲಿಕ್ಕಾಗಿಯೂ, ಮುಗ್ಧ ಅವಿದ್ಯಾವಂತ ಹಾಗೂ ಅಸಂಘಟಿತ ಜನರ ಮೇಲೆ ಸವಾರಿ ಮಾಡುವುದನ್ನು ತಡೆಗಟ್ಟಲಿಕ್ಕಾಗಿಯೂ ಹಾಗೂ ದೇವರ ಮೇಲೆ ಭಕ್ತಿಯಿಂದ ಸಮರ್ಪಿಸಿದ ಕಾಣಿಕೆಗಳ ದುರುಪಯೋಗವನ್ನು ತಡೆಗಟ್ಟಲಿಕ್ಕಾಗಿಯೂ ರೂಪಿಸಿದ ಕಾನೂನಿದು ಎಂದು ಸರಕಾರ ಹೇಳುತ್ತದೆ.

ಈ ಕಾನೂನಿಗೆ ಒಳಪಟ್ಟ ದೇವಸ್ಥಾನಕ್ಕೆ/ಧಾರ್ಮಿಕಸಂಸ್ಥೆಗೆ ಸರಕಾರದಿಂದ ನೇಮಿಸಲ್ಪಟ್ಟ ಆಡಳಿತಾಧಿಕಾರಿಯೊಬ್ಬನಿರುತ್ತಾನೆ. ಇವನು ದೇವಸ್ಥಾನದ ಆಗುಹೋಗುಗಳಿಗೆ ಸರಕಾರಕ್ಕೆ ಉತ್ತರದಾಯಿಯಾಗಿರುತ್ತಾನೆ. ಹಾಗಾಗಿ ದೇವಸ್ಥಾನದ ಆಗುಹೋಗುಗಳೆಲ್ಲಾ ಇವನ ಗಮನದ/ಸಮ್ಮತಿಯ ಮುಖಾಂತರವೇ ಆಗಬೇಕು. ಪ್ರತಿಯೊಂದು ದೇವಸ್ಥಾನ/ಧಾರ್ಮಿಕ ಸಂಸ್ಥೆಗೆ ಆ ಊರಿನ ಜನರನ್ನೇ ಒಳಗೊಂಡ ಆಡಳಿತ ಮಂಡಳಿ ಇರುತ್ತದೆ, ಈ ಆಡಳಿತ ಮಂಡಳಿ ಮಾಡುವ ದೇವಸ್ಥಾನದ ಯಾವುದೇ ಕಾರ್ಯಗಳು ಆಡಳಿತಾಧಿಕಾರಿಯ ಗಮನಕ್ಕೇ ಬಂದು ಆಗಬೇಕೇ ವಿನಃ ಸರಕಾರಕ್ಕೆ ಮೂಗು ತೂರಿಸುವ ಅವಕಾಶ ಈ ಕಾನೂನಿನಲ್ಲಿಲ್ಲ. ಅನುವಂಶಾಧಿಕಾರದಲ್ಲಿ (ಮೊಕ್ತೇಸರ/ಅರ್ಚಕ ಇತ್ಯಾದಿ)ಯಾವುದೇ ಹಸ್ತಕ್ಷೇಪ ಇಲ್ಲ. ಆದರೆ ದೇಣಿಗೆಯಾಗಿ ಬಂದ ಹಣ ಮತ್ತು ಕಾಣಿಕೆಗಳಿಗೆ ಲೆಕ್ಕ ಇಡಬೇಕು ಹಾಗೂ ಖರ್ಚಿನ ಲೆಕ್ಕಾಚಾರ ಯಾವ ರೀತಿ ನೀಡಬೇಕು ಎಂಬುದನ್ನು ಈ ಕಾನೂನು ನಿಗದಿ ಪಡಿಸುತ್ತದೆ. ಅದೇ ರೀತಿ ಧಾರ್ಮಿಕ ಸಂಸ್ಥೆಗಳಲ್ಲಿ ಇತಿಹಾಸದ ಕುರುಹುಗಳನ್ನು ಹಾಳುಗೆಡಹುವುದು, ಅಸ್ಪ್ರಶ್ಯತೆಯನ್ನು ಆಚರಿಸುವುದನ್ನು ಈ ಕಾನೂನು ನಿಷೇಧಿಸುತ್ತದೆ.

ಈ ಕಾನೂನಿನಿಂದ ಹಿಂದೂ ಧರ್ಮಕ್ಕಾದ ಒಳಿತುಗಳೇನು?

ದೇವಸ್ಥಾನಕ್ಕೆ ಸಾರ್ವಜನಿಕರು ನೀಡುವ ಹಣ ದೇಣಿಗೆಯೇ(ಡೊನೇಷನ್) ಹೊರತು ಪಾವತಿಯಲ್ಲ(ಪೇಮೆಂಟ್). ಆದುದರಿಂದ ಈ ಹಣವು ಒಂದೋ ದೇವರ ಪೂಜೆಗೆ ಬಳಕೆಯಾಗಬೇಕು ಇಲ್ಲವೇ ಸಾರ್ವಜನಕ ಸೇವೆಗೆ ಬಳಕೆಯಾಗಬೇಕೇ ಹೊರತು ಯಾರೊಬ್ಬರ ಸ್ವಂತ ಖಾತೆಗೆ ಹೋಗುವಂತಿಲ್ಲ ಅಲ್ಲವೇ? ಸಾರ್ವಜನಿಕರು ದೇವರ ಮೇಲಿನ ಭಕ್ತಿಯಿಂದ ಹಾಕಿದ ಕಾಣಿಕೆ ಹಣಕ್ಕೆ ದೇವರು ಲೆಕ್ಕ ಇಡುವುದಿಲ್ಲವಲ್ಲಾ! ಹಾಗಾದರೆ ಈ ಲೆಕ್ಕವನ್ನು ಯಾರು ಇಡಬೇಕು? ಯಾರು ಕೇಳುವವರು? ಈ ಕಾನೂನಿನಿಂದ ಕೋಟ್ಯಾಂತರ ಹಣ ಯಾರ್ಯಾರೋ ಹೊಡೆದುಕೊಳ್ಳುವುದು ತಪ್ಪಿದೆ. ಅವ್ಯವಹಾರ ಭ್ರಷ್ಟಾಚಾರ ಕೇವಲ ಸರಕಾರಕ್ಕೆ ಮಾತ್ರ ಸೀಮಿತವೆಂದುಕೊಳ್ಳಬೇಡಿ, ಖಾಸಗಿ ಸಂಸ್ಥೆಗಳಲ್ಲೂ ಹಣವನ್ನು ಕೊಳ್ಳೆಹೊಡೆಯುವ ಜನರು ಬೇಕಾದಷ್ಟಿದ್ದಾರೆ. ತಮ್ಮವರೇ ಸ್ವಾಮೀಜಿ, ಸಂಬಂಧಿಕರೇ ಮ್ಯಾನೆಜರ್ ಆಗಿದ್ದು ಮಠಮಂದಿರಗಳಿಗೆ ದೇಣಿಗೆಯಾಗಿ ಬಂದ ಹಣಕ್ಕೆ ಲೆಕ್ಕಪಕ್ಕ ತೋರಿಸದೆ ಗುಳುಂ ಮಾಡುತ್ತಿರುವ ಉದಾಹರಣೆಗಳು ಸಾಕಷ್ಟಿವೆ. ಈಗ ಈ ಕಾನೂನಿನಿಂದಾಗಿ ಕನಿಷ್ಟ ಪಕ್ಷ ಹುಂಡಿಗೆ ಬಿದ್ದ ಹಣದ/ಕಾಣಿಕೆಯ ಲೆಕ್ಕ ಸಿಗುತ್ತದೆ, ಮಾಡಿದ ಖರ್ಚಿಗೆ ಲೆಕ್ಕ ಕೊಡಬೇಕಾಗುತ್ತದೆ.

ಅರ್ಚಕರಿಗೆ ಹಾಗೂ ಪರಿಚಾರಕರಿಗೆ ಕನಿಷ್ಟ ವೇತನ ನಿಗದಿಯಾಗಿದೆ. ಈ ವೇತನ ಹೆಚ್ಚಿರಲಿ ಅಥವಾ ಕಡಿಮೆಯೇ ಇರಲಿ ಕನಿಷ್ಟವೇತನವಂತೂ ನಿಗದಿಯಾಗಿದೆ. ಸಂಪೂರ್ಣ ಖಾಸಗೀ ಆಡಳಿತವಿದ್ದರೆ ಬರುವ ವೇತನವೆಷ್ಟಿದ್ದಿರಬಹುದು? ದೇವಾಲಯವೊಂದಕ್ಕೆ ಆಡಳಿತಗಾರನಾಗಿರುವವನು ತಾನು ನಡೆಸುತ್ತಿರುವ ಇನ್ನೊಂದು ವ್ಯವಹಾರಿ ಸಂಸ್ಥೆಯೊಂದರಲ್ಲಿ ಸಿಬಂದಿಗಳಿಗೆ ಕೊಡುವ ವೇತನವನ್ನು ಪರಿಶೀಲಿಸಿದರೆ ಈ ಪ್ರಶ್ನೆಗೆ ಉತ್ತರ ಸಿಗುತ್ತದೆ.

ಇತಿಹಾಸದ ಕುರುಹುಗಳ ಸಂರಕ್ಷಣೆ. ಹಿಂದೂ ಧರ್ಮದಲ್ಲಿ ಒಬ್ಬೊಬ್ಬರಿಗೆ ಒಬ್ಬೊಬ್ಬ ದೇವರು ಪ್ರಧಾನ. ತಾನಿರುವ ದೇವಸ್ಥಾನದಲ್ಲಿ ತಾವು ಪೂಜೆಗೈಯುವ ದೇವರೇ ಇರಬೇಕು ಎಂಬ ಮೂರ್ಖರು ದೇವರ ಮೂರ್ತಿಯನ್ನು ಬದಲಾಯಿಸುವುದು, ದೇವರ ಹೆಸರನ್ನೇ ಬದಲಾಯಿಸುವುದು, ಶಿಲಾಶಾಸನಗಳನ್ನು ನಾಶಮಾಡುವುದು, ಕಟ್ಟು ಕಥೆಗಳನ್ನು ಹಬ್ಬಿಸುವುದು ಇತ್ಯಾದಿಗಳನ್ನು ಮಾಡುವುದು/ಮಾಡಿರುವುದು ಎಲ್ಲರ ಗಮನಕ್ಕೆ ಬಂದಿರುವ ವಿಷಯವೇ ಆಗಿದೆ. ಈ ಕಾನೂನಿನಿಂದಾಗಿ ಈ ತರಹದ ವ್ಯವಹಾರಗಳಿಗೆ ಕಡಿವಾಣ ಬಿದ್ದಿದೆ. ಹಿಂದೂ ಧರ್ಮಕ್ಕೆ ಮಾರಕವಾಗಿದ್ದ ಧರ್ಮಸಂಘರ್ಷ ತಪ್ಪಿದೆ. ಸಾಮರಸ್ಯ ಕಾಪಾಡಿದೆ.


**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ


ಕೆಲವು ಜಾತಿಗಳ ಜನರಿಗೆ ದೇವಸ್ಥಾನಕ್ಕೆ ಪ್ರವೇಶವೇ ಇರಲಿಲ್ಲ. ಪ್ರಸಾದವನ್ನು ದೂರದಿಂದ ಎಸೆಯುವುದು, ಪಂಕ್ತಿ ಭೇಧ ಮಾಡುವುದು, ಎಂಜಲು ಅನ್ನ ನೀಡುವುದು ಇತ್ಯಾದಿ ಅಸ್ಪ್ರಶ್ಯತೆಯ ಆಚರಣೆಗಳಿಗೆ ದೇವಸ್ಥಾನಗಳೇ ಕೇಂದ್ರಗಳಾಗಿದ್ದವು(ಎಂದು ದುಃಖದಲ್ಲಿ ಹೇಳಬೇಕಾಗುತ್ತದೆ). ಒಂದು ವೇಳೆ ಸರಕಾರ ದೇವಸ್ಥಾನಗಳ ಇಂತಹಾ ಚಟುವಟಿಕೆಗಳನ್ನು ನಿಷೇಧಿಸದಿರುತ್ತಿದ್ದರೆ ಇಷ್ಟು ಹೊತ್ತಿಗೆ ಹೀಗೆ ತಾರತಮ್ಯಕ್ಕೊಳಗಾದ ಜಾತಿಗಳ ಜನರು ಅನ್ಯಧರ್ಮಗಳಿಗೆ ಸಾಮೂಹಿಕವಾಗಿ ಮತಾಂತರವಾಗುತ್ತಿದ್ದುದರಲ್ಲಿ ಸಂದೇಹವೇ ಇಲ್ಲ.

ದೇವದಾಸಿ ಪದ್ಧತಿ, ಬೆತ್ತಲೆ ಸೇವೆ, ಬಲಿಕೊಡುವುದು, ಇತ್ಯಾದಿ ಮೂಢನಂಬಿಕೆಗಳು ನಿಧಾನವಾಗಿಯಾದರೂ ಮಾಯವಾಗಿವೆ. ಈ ಕಾನೂನು ಇದ್ದುದರಿಂದರಲ್ಲವೇ ಸರಕಾರಕ್ಕೆ ಇಂತಹಾ ಆಚರಣೆಗಳಿಗೆ ಇಂಬುಕೊಡುತ್ತಿದ್ದ ಧಾರ್ಮಿಕ ಸಂಸ್ಥೆಗಳಲ್ಲಿ ಅದನ್ನು ನಿಷೇಧಿಸಲು ಸಾಧ್ಯವಾದದ್ದು?

ಹೀಗೆ ಈ ಕಾಯ್ದೆಯಿಂದ ಹಿಂದೂ ಧರ್ಮಕ್ಕೆ ಅನೇಕ ಉಪಕಾರಗಳು ಆಗಿವೆ. ಈ ಕಾನೂನಿನಿಂದ ಯಾವುದೇ ಒಂದು ದೇವಸ್ಥಾನದಲ್ಲಿ ಸಂಗ್ರಹವಾದ ಹಣ ಹಜ್ ಯಾತ್ರೆಯ ಸಬ್ಸಿಡಿಗೆ ಬಳಕೆಯಾಗುತ್ತದೆ ಎಂಬ ಪ್ರಚಾರ ಹುರುಳಿಲ್ಲದ್ದು. ಯಾಕೆಂದರೆ ಹಜ್ ಯಾತ್ರೆಗೆ ಸಬ್ಸಿಡಿ ಕೊಡುವುದು ಕೇಂದ್ರ ಸರಕಾರ. ದೇವಸ್ಥಾನದ ಹಣ ಹೋಗುವುದು ರಾಜ್ಯ ಸರಕಾರದ ಖಜಾನೆಯಲ್ಲಿರುವ ದೇವಸ್ಥಾನದ ಖಾತೆಗೆ.

ದೇವಸ್ಥಾನಗಳ ಹಣ ಚರ್ಚ್ ಮಸೀದಿಗಳಿಗೆ ಬಳಕೆಯಾಗುತ್ತದೆ ಎಂಬುದು ಇನ್ನೊಂದು ಸುಳ್ಳು. ಯಾವುದೇ ದೇವಸ್ಥಾನದಲ್ಲಿ ಕಾಣಿಕೆಯಾಗಿ ಬಂದ ಹಣವು ಆಯಾ ದೇವಸ್ಥಾನದ ಆಡಳಿತ ಮಂಡಳಿಯವರು (ಅಂದರೆ ಗ್ರಾಮಸ್ಥರು) ಅ ಹಣವನ್ನು ಖರ್ಚು ಮಾಡುವ ಅಭಿವೃದ್ಧಿ ಕಾಮಗಾರಿಗಳ ರೂಪುರೇಶೆ ಮಾಡಿಕೊಟ್ಟರೆ ಆ ದೇವಸ್ಥಾನಕ್ಕೇ ಬಳಕೆಯಾಗುತ್ತದೆ. ಕೆಲವು ದೇವಸ್ಥಾನಗಳಿಗೆ ಎಷ್ಟು ಖರ್ಚು ಮಾಡಿದರೂ ಇನ್ನೂ ಮಿಕ್ಕುಳಿಯುವಷ್ಟು ಆದಾಯವಿರುವುದರಿಂದ ಅಲ್ಲಿ ಉಳಿದ ಹಣವನ್ನು ಇತರ ಸಣ್ಣ ದೇವಸ್ಥಾನಗಳ ಅಭಿವೃದ್ಧಿಗೆ ಬಳಸುವ ಅವಕಾಶವಿದೆ. ಚರ್ಚ ಮಸೀದಿಗಳಿಗೆ ಬಳಕೆಯಾಗುವುದು ನಾವು ಕಟ್ಟುವ ತೆರಿಗೆ ಹಣದ ಪಾಲು. ಅದು ಸರಕಾರವು ಬಜೆಟ್‌ನಲ್ಲಿಯೇ ವಿಂಗಡಿಸಿಡುವ ಪಾಲು. ಒಂದು ವೇಳೆ ಅವರಿಗೆ ದೊಡ್ಡ ಪಾಲು ಸಿಗುತ್ತದೆಯೆಂದಾದರೆ ಅದು ಅವರ ಒಗ್ಗಟ್ಟಿನ ಫಲವೆನ್ನಬಹುದಷ್ಟೇ.

ಒಟ್ಟಾರೆ ಈ ಕಾನೂನಿನಿಂದ ಕೆಲವು ಸ್ವಹಿತಾಸಕ್ತಿಗಳಿರುವ ಜನರಿಗೆ ಮಾತ್ರ ತೊಡಕಷ್ಟೇ ಹೊರತು ಹಿಂದೂ ಧರ್ಮಕ್ಕಾಗಲೀ ದೇವಸ್ಥಾನಗಳಿಗಾಗಲಿ ಅಲ್ಲ ಎಂಬುದು ವೇದ್ಯವಾಗುತ್ತದೆ. ದೇವಾಲಯದ ಆಡಳಿತ ನೋಡಿಕೊಳ್ಳುತ್ತಿರುವರು (ಈಗಾಗಲೇ ಕಾನೂನು ವ್ಯಾಪ್ತಿಯಲ್ಲಿರುವವರೂ ಹಾಗೂ ಇಲ್ಲದವರೂ)ಅವ್ಯವಹಾರ ನಡೆಸದಂತೆ ಈ ಕಾನೂನು ಕಣ್ಣಿಡುತ್ತದೆಯೇ ವಿನಃ ದೇವಸ್ಥಾನಗಳನ್ನು ತನ್ನ ಸುಪರ್ಧಿಗೆ ತೆಗೆದುಕೊಳ್ಳುವುದಿಲ್ಲ. ಹಾಗಾದರೆ ಈ ಕಾನೂನನ್ನು ರದ್ದು ಮಾಡಬೇಕು, ಹಿಂದೂ ಧಾರ್ಮಿಕ ಸಂಸ್ಥೆಗಳಿಗೆ ಸ್ವೇಚ್ಛೆ ಕೊಡಬೇಕು ಎಂಬ ವಾದ ಸರಿಯೇ ?

ಈ ವಿಚಾರದಲ್ಲಿ ಓದುಗರ ಅಭಿಪ್ರಾಯಗಳಿಗೆ ಸ್ವಾಗತವಿದೆ.


**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12% |
| ಹಳೆಯ ವಾಹನ | : | 13.5% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12.5% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2010-11 ರಿಂದ 2015-16ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)



*With Best Compliments from :*




**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)

# ''ಯಕ್ಷಗುಚ್ಛ''

- ವೈ. ಮೋಹನ ರಾವ್



ಕೃತಿ : **ಯಕ್ಷಗುಚ್ಛ (ಶ್ರೀ ಸತ್ಯನಾರಾಯಣ, ನಾಲ್ವರ ಗರ್ವಭಂಗ ಮತ್ತು ದೂರ್ವಾ ಗಣಪತಿ- ಮೂರು ಯಕ್ಷಗಾನ ಪ್ರಸಂಗಗಳು)** ಲೇಖಕರು : **ಎರ್ಮಾಳು ವಾಸುದೇವ ರಾವ್.** ಪ್ರಕಾಶನ : **ಜಯಲಕ್ಷ್ಮಿ ಪ್ರಕಾಶನ, ಎರ್ಮಾಳು** ಬೆಲೆ : **ರೂ.50**

''ಯಕ್ಷಗುಚ್ಛ'' ಎಂಬ ಈ ಕೃತಿಯನ್ನು ಎರ್ಮಾಳು ವಾಸುದೇವ ರಾವ್ ರಚಿಸಿರುವರು. ಭಾಗವತರ ಹಾಡಿನ ರಾಗಕ್ಕೆ ಮದ್ದಳೆ, ಚೆಂಡೆ ವಾದನದ ನಿನಾದಕ್ಕೆ ಗೆಜ್ಜೆಯ ಕಟ್ಟಿ ಕುಣಿವ ಯಕ್ಷಗಾನದ ಪಾತ್ರಧಾರಿಯ ವೇಷವು ಮತ್ತು ಗೆಜ್ಜೆಗಳ ಚಿತ್ರವು ಮುಖಪುಟದಲ್ಲಿ ಸೊಗಸಾಗಿ ಮೂಡಿಬಂದಿದೆ.

'ಲೇಖಕರ ಮಾತು' ಎಂಬಲ್ಲಿ ಈ ಮಾತುಗಳನ್ನು ಹೇಳಿರುವರು-''ಈ ಪುಸ್ತಕದಲ್ಲಿ ಬರುವ ಮೊದಲ ಪ್ರಸಂಗವು ಈಗ ಎಲ್ಲಾ ಕಡೆಗಳಲ್ಲಿ ಆಚರಿಸುವ ಶ್ರೀ ಸತ್ಯನಾರಾಯಣ ವ್ರತದ ಪೂಜೆಯ ಕಥೆಯೆ ಆಗಿದೆ. ಪ್ರಾರಂಭದ ಸೂತ ಪೌರಾಣಿಕರ ಬದಲು ಶ್ರೀ ಮಹಾವಿಷ್ಣು ಮತ್ತು ನಾರದರ ಪಾತ್ರವನ್ನು ತೆಗೆದುಕೊಂಡಿದ್ದೇನೆ. ಇದರಿಂದ ಕಥೆಗೇನು ಲೋಪವಾಗಲಿಕ್ಕಿಲ್ಲವೆಂದು ನನ್ನ ಭಾವನೆ. ಯಕ್ಷಗಾನ ಪ್ರಸಂಗಗಳಲ್ಲಿ ನವರಸಗಳಿದ್ದರೂ ವೀರರಸ ಪ್ರಧಾನವಾಗಿದ್ದರೆ ಅದಕ್ಕೊಂದು ಕಳೆಕಟ್ಟುತ್ತದೆ. ಅದಕ್ಕಾಗಿ ಮೂಲ ಕಥೆಯಲ್ಲಿ ಬರುವ ಕಳ್ಳನ ಕಥೆ, ಸಾಧುವನ್ನು ಕಳ್ಳರು ದೋಚುವುದು ಮತ್ತು ಮಹಾರಾಜನ ಬೇಟೆಯನ್ನು ಯಕ್ಷಗಾನಕ್ಕೆ ಹೊಂದುವಂತೆ ವಿವರವಾಗಿ ತೆಗೆದುಕೊಂಡಿದ್ದೇನೆ. ಹಾಗೆಯೇ ಕಥೆಯಲ್ಲಿ ಹಿಂದುಮುಂದು ಮಾಡಿಕೊಂಡು ಹೊಂದಿಸಿಕೊಂಡಿದ್ದೇನೆ. ಜನರು ಭಕ್ತಿಯಿಂದ ಪೂಜಿಸುವ ಸತ್ಯನಾರಾಯಣ ವ್ರತದ ಕಥೆಗೇನೂ ಕುಂದು ಬರದಂತೆ ಜಾಗೃತೆ ವಹಿಸಿದ್ದೇನೆ.

ಎರಡನೆಯ ಪ್ರಸಂಗವನ್ನು ಭಾರತದಲ್ಲಿ ಮತ್ತು ಭಾಗವತದಲ್ಲಿ ಬರುವ ವಿಚಾರವನ್ನೆ ಆಧರಿಸಿ, ನನ್ನದೇ ಕಲ್ಪನೆಯನ್ನು ಅನುಸರಿಸಿ ಬರೆದಿದ್ದೇನೆ. ಮೂರನೆಯ ಪ್ರಸಂಗವು ಗಣೇಶ ಪುರಾಣದಲ್ಲಿ ಬರುವ ಒಂದು ಕಥೆಯನ್ನು ಆಧರಿಸಿ ರಚನೆಯಾಗಿದೆ.''

ಎರ್ಮಾಳು ವಾಸುದೇವ ರಾಯರ ಮಕ್ಕಳು ಈ ಪುಸ್ತಕದ ಪ್ರಕಾಶಕರು. ಅವರು ಹೇಳುವಂತೆ ''ನಮ್ಮ ತಂದೆಯವರು ವೃತ್ತಿಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿ 25 ವರುಷ ಸಂದರೂ ಈಗಲೂ ಅವರು ತಮ್ಮ ತೆಂಕುತಿಟ್ಟಿನ ಯಕ್ಷಗಾನ ಕಲೆಯನ್ನು ಪಸರಿಸುತ್ತಲೇ ಇದ್ದಾರೆ. ತೆಂಕುತಿಟ್ಟಿನ ಯಕ್ಷಗಾನದ ಗುರುಗಳಾಗಿ (ಭಾಗವತಿಕೆ, ಮದ್ದಳೆ, ಚೆಂಡೆ ಹಾಗೂ ನಾಟ್ಯ), ಬಡಗುತಿಟ್ಟು ಯಕ್ಷಗಾನದ ಮದ್ದಳೆವಾದಕರಾಗಿ, ಹರಿಕಥೆ, ಭಜನೆ ಮತ್ತು ನಾಟಕಗಳಿಗೆ ತಬಲವಾದಕರಾಗಿ, ಯಕ್ಷಗಾನ ಮತ್ತು ನಾಟಕಗಳಲ್ಲಿ ವರ್ಣಾಲಂಕಾರ, ರಾಮಾಯಣ, ಮಹಾಭಾರತ, ಜೈಮಿನಿ ಭಾರತದ ವಾಚನಗಳಲ್ಲಿ ವಾಚಕರಾಗಿ ಹೀಗೆ ಹತ್ತುಹಲವು ವಿದ್ಯೆಗಳಲ್ಲಿ ನೈಪುಣ್ಯತೆಯನ್ನು ಪಡೆದು ಇಂದಿನ ಯುವಜನತೆಗೆ ಕಲಿಸಿ ಕಲಾಸೇವೆಯಲ್ಲಿ ಮುಂದೆ ಬರುವಂತೆ ಪ್ರೋತ್ಸಾಹಿಸುತ್ತಿದ್ದಾರೆ.

ಇವರು ಪ್ರಚಾರ ಪ್ರಿಯರಲ್ಲ, ಮಿತಭಾಷಿ, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಈಗಲೂ ಸಹ ಹಲವಾರು ಸಂಘ ಸಂಸ್ಥೆಗಳಲ್ಲಿ ಯಕ್ಷಗಾನದ ತರಬೇತಿ ಶಿಬಿರಗಳನ್ನು ನಡೆಸುತ್ತಿದ್ದಾರೆ. ಎಲೆಮರೆಯ ಕಾಯಿಯಂತೆ ಕಲಾಸೇವೆಯನ್ನು ಮಾಡುವ ಇವರು ಹಲವಾರು ಸಂಘ ಸಂಸ್ಥೆಗಳಿಂದ ಸಂಮಾನಿತರಾಗಿದ್ದಾರೆ.''

'ಶ್ರೀಸತ್ಯನಾರಾಯಣ' ಯಕ್ಷಗಾನ ಪ್ರಸಂಗ ದಲ್ಲಿ ಬರುವ ಮೊದಲ ಪ್ರಾರ್ಥನೆ ಹೀಗಿದೆ-

ವಂದಿಸುತ ದೇವನಿಗೆ ಗುರುವಿಗೆ
ತಂದೆ ತಾಯ್ಗಳ ನಮಿಸಿ ಸಜ್ಜನ।
ವೃಂದ ಕವಿಗಳ ನೆನೆದು ಹೇಳುವೆ
ಹರಿಯ ಕಥೆಯಿದನು ॥...

ಅದೇ ಪ್ರಸಂಗದಲ್ಲಿ ಇನ್ನೊಂದು ಪದ್ಯ ಹೀಗಿದೆ :-

ಮನೆಯ ಸಂಪದವೆಲ್ಲ ಚೋರರವಶವಾಗೆ।
ಮನದಿ ಮರುಗತಲೀಲಾವತಿಯು ॥
ಮನೆ ಮನೆ ತಿರಿದುಂಬ ಕಾಲವು ಬಂತೀಗ।
ಮನುಮಥ ಜನಕನ ಮರೆತಿರಲು ॥

ಈ ಪ್ರಸಂಗದಲ್ಲಿ ಬರುವ ಲೀಲಾವತಿ ಎಲ್ಲ ಸಂಪತ್ತನ್ನು ಚೋರರಿಂದಾಗಿ ಕಳಕೊಂಡು ಮನಸ್ಸಿನಲ್ಲಿ ಬೇಸರದಿಂದ ಮತ್ತೆ ಮನೆ ಮನೆಗೆ ತಿರುಗಿ ಬೇಡುವ ಪರಿಸ್ಥಿತಿ ಬರಲು ಅವಳು ಈಗ ಶ್ರೀಹರಿಯನ್ನು ನೆನಪಿಸಿಕೊಳ್ಳುತ್ತಾಳೆ.

ನಾಲ್ವರ ಗರ್ವಭಂಗ ಪ್ರಸಂಗದಲ್ಲಿ ಬರುವ ಒಂದು ಪದ್ಯ ಹೀಗಿದೆ :

ವರರಾಮನಾಮವು ಪರಮ ಪವಿತ್ರವು।
ಹರಿಪುದು ಭವದನೋವ ॥
ಸುರವವ ತಿಳಿದಿಹ ದೇವನು ಎನ್ನನು।
ಮರೆತನೆಕಾಯೋ ಶ್ರೀರಾಮ ॥

ಉತ್ತಮೋತ್ತಮ ರಾಮ ಭಕ್ತನಾದ ಹನುಮಂತನು ಈ ಪದ್ಯದಲ್ಲಿ ತನ್ನನ್ನು ಶ್ರೀರಾಮ ಏಕೆ ಮರೆತನೋ ಎಂದು ಆಲೋಚಿಸುತ್ತಾನೆ.

ದೂರ್ವಾಗಣಪತಿ ಪ್ರಸಂಗದಲ್ಲಿ ಗರಿಕೆಯ ಮಹತ್ವ ತಿಳಿಸಲ್ಪಟ್ಟಿದೆ. ಪದ್ಯ ಹೀಗಿದೆ :

ಹೊಂದಿಪೆನು ನಾನೆನುತಲಿ । 1 ।
ಗರಿಕೆ ಯರ್ಪಿಸಿಯೆನ್ನ ಪೂಜಿಪ।
ಪರಮ ಭಕ್ತರ ಮನಕೆ ಶಾಂತಿಯ।
ಕರುಣಿಸುತಲಿ ತುಷ್ಟಿಪುಷ್ಟಿಯ।
ನಿರತ ಪಾಲಿಪೆನೆಂದನು । 2 ।

ಎರ್ಮಾಳು ವಾಸುದೇವ ರಾಯರು ಅಧ್ಯಾಪಕರಾಗಿರುವಾಗ ಮತ್ತು ವೃತ್ತಿಯಿಂದ ನಿವೃತ್ತಿಗೊಂಡು ಸುಮಾರು 30 ವರ್ಷ ಕಳೆದರೂ ಯಕ್ಷಗಾನ, ನಾಟಕ, ವರ್ಣಾಲಂಕಾರ, ತಬಲಾ ವಾದನ, ವಾಚನ, ಭಾಗವತಿಕೆ, ಚೆಂಡೆ, ನಾಟ್ಯ ಮತ್ತು ಗುರುಗಳಾಗಿ ಕಲಾಸೇವೆಯಲ್ಲಿ ಪ್ರೋತ್ಸಾಹಿಸುತ್ತಿದ್ದಾರೆ. ಅವರಿಗೆ ದೇವರು ಆಯುರಾರೋಗ್ಯ ಭಾಗ್ಯ ಮತ್ತು ಸಕಲ ಸಂಪತ್ತು, ಸುಖಗಳನ್ನು ಕರುಣಿಸುವಂತಾಗಲಿ ಎಂಬುದೇ ನಮ್ಮ ಪ್ರಾರ್ಥನೆ.

## ಸಿಂಡಿಕೇಟ್ ಬ್ಯಾಂಕಿನಿಂದ ಪಾದೆಬೆಟ್ಟು ದೇವಸ್ಥಾನದ ಅಭಿವೃದ್ಧಿಗೆ ಕೊಡುಗೆ



ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಜೀರ್ಣೋದ್ಧಾರ ಸಂಬಂಧ ಅಭಿವೃದ್ಧಿ ಕಾರ್ಯಗಳಿಗಾಗಿ ರಾಷ್ಟ್ರೀಕೃತ ಸಿಂಡಿಕೇಟ್ ಬ್ಯಾಂಕ್ ರೂ.75,000/- ಸಹಾಯಧನದ ಕೊಡುಗೆ ನೀಡಿದೆ. ಈ ಸಂದರ್ಭದಲ್ಲಿ ದೇವಾಲಯಕ್ಕೆ ಭೇಟಿ ನೀಡಿದ ಉಡುಪಿ ಪ್ರಾದೇಶಿಕ ಕಛೇರಿಯ ಉಪಮಹಾಪ್ರಬಂಧಕ, ಸಿಂಡಿಕೇಟ್ ಬ್ಯಾಂಕ್ ಪ್ರಾದೇಶಿಕ ಕಛೇರಿ, ಉಡುಪಿ, ಶ್ರೀ ಎಸ್.ಎಸ್. ಹೆಗ್ಡೆಯವರು ಅಭಿವೃದ್ಧಿ ಕಾರ್ಯದ ಬಗ್ಗೆ ಮೆಚ್ಚುಗೆ ಸೂಚಿಸಿದರು.

ಅವರನ್ನು ಶಾಲು ಹೊದಿಸಿ, ಫಲ-ಪ್ರಸಾದಗಳನ್ನು ನೀಡಿ ಸತ್ಕರಿಸಿದ ಆಡಳಿತ ಮೊಕ್ತೇಸರ ಶ್ರೀ ಬಿ. ಜಯರಾಮ ರಾಯರು ಬ್ಯಾಂಕಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದರು. ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಎಮ್.ಕೆ. ದಿವಾಕರ್ ರಾವ್, ಜನಾರ್ಧನ್ ರಾವ್, ಅರ್ಚಕರಾದ ಜಗದೀಶ್ ಭಟ್ ಹಾಗೂ ದೇವರಾಯ ಶರ್ಮ ಉಪಸ್ಥಿತರಿದ್ದರು.

## ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ರಥೋತ್ಸವ



ಕಾಸರಗೋಡು ಜಿಲ್ಲೆಯ ನಮ್ಮ ಸಮಾಜದ ಪುರಾತನ ದೇವಾಲಯವಾದ ಕೂಡ್ಲು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಕುಂಭ ಮಾಸದ ಹುಣ್ಣಿಮೆಯ ದಿನ ರಥೋತ್ಸವವು ಒಟ್ಟು ಏಳು ದಿನಗಳ ಕಾಲ ವಿವಿಧ ಧಾರ್ಮಿಕ-ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನೆರವೇರಿತು. ನೂರಾರು ಸಮಾಜ ಬಾಂಧವರು ಊರ ಪರಿಸರದ ಭಕ್ತರು ಆಗಮಿಸಿ ಶ್ರೀದೇವರ ಗಂಧ ಪ್ರಸಾದ ಸ್ವೀಕರಿಸಿ, ಪ್ರತಿ ದಿನವೂ ನೆರವೇರಿದ ಅನ್ನಸಂತರ್ಪಣೆಯಲ್ಲಿ ಭಾಗಿಗಳಾಗಿ ಕೃತಾರ್ಥರಾದರು.

## ಹರಿದಾಸ ಶ್ರೀ ಮ.ನಾ. ಹೆಬ್ಬಾರರಿಗೆ ಅಂಬಲಪಾಡಿಯಲ್ಲಿ ಸಮ್ಮಾನ



ಉಡುಪಿ ಅಂಬಲಪಾಡಿಯ ಯಕ್ಷಗಾನ ಸಂಘದ ವಾರ್ಷಿಕೋತ್ಸವದ ಸಂದರ್ಭದಲ್ಲಿ ಹರಿದಾಸರೂ, ನಿವೃತ್ತ ಉಪನ್ಯಾಸಕರೂ, ಯಕ್ಷಗಾನ ಕಲಾವಿದರೂ ಆಗಿರುವ ಶ್ರೀ ಮರೂರು ನಾರಾಯಣ ಹೆಬ್ಬಾರ ಇವರನ್ನು ಅಂಬಲಪಾಡಿ ದೇವಸ್ಥಾನದಲ್ಲಿ ಕೀ। ಶೇ। ಶ್ರೀ ಆನಂದ ಗಾಣಿಗರ ನೆನಪಿನ ಪ್ರಶಸ್ತಿಯನ್ನಿತ್ತು ದೇವಸ್ಥಾನದ ಧರ್ಮದರ್ಶಿಗಳಾದ ಡಾ। ನಿ.ಬೀ ವಿಜಯ ಬಲ್ಲಾಳ್ ಇವರು ಶಾಲು ನೆನಪಿನ ಕಾಣಿಕೆ, ಹಾರ, ಹಣ್ಣು ಇತ್ಯಾದಿಗಳನ್ನಿತ್ತು ಸನ್ಮಾನಿಸಿದರು. ಡಾ। ಪಾದೆಕಲ್ಲು ವಿಷ್ಣು ಭಟ್ಟರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಹೆಬ್ಬಾರರು ತನಗಿತ್ತ ಸಮ್ಮಾನಕ್ಕೆ ಕೃತಜ್ಞತೆ ಸೂಚಿಸುತ್ತಾ "ಪ್ರತಿಭಾನಾಂ ಕಾವ್ಯ ವಿದ್ಯಾ ಪ್ರಚಯ ಪರಿಚಯಂ, ವೃದ್ಧ ಸೇವಾನುರಾಗಂ, ಸತತಾಭ್ಯಾಸ ಪ್ರಯತ್ನಂ ಕವಿತೆಗೆ ನಿಯತಂ ಕಾರಣಂ" ಎಂದು ವಿವರಿಸಿದರು.

## ಮೀನ ಮಾಸದ ವಿಶೇಷ ದಿನಗಳು

| | | | |
|---|---|---|---|
| 14-03-2018 | ಮೀನ ಸಂಕ್ರಮಣ ಶ್ರೀಶಾರದಾ ದೇವಸ್ಥಾನದ ಪ್ರತಿಷ್ಠಾ ಮಹೋತ್ಸವ | 01-04-2018 | ವಸಂತ ಋತು, ಚೈತ್ರಮಾಸ ಕೃಷ್ಣಪಕ್ಷಾರಂಭ |
| 17-03-2018 | ಅಮಾವಾಸ್ಯೆ | 03-04-2018 | ಸಂಕಷ್ಟಹರ ಚತುರ್ಥೀ ಚಂದ್ರೋದಯ ರಾತ್ರಿ 9-38ಕ್ಕೆ |
| 18-03-2018 | ಚಾಂದ್ರಮಾನ ಯುಗಾದಿ, ವಿಳಂಬಿ ಸಂವತ್ಸರದ ವಸಂತ ಋತು, ಚೈತ್ರಮಾಸ ಶುಕ್ಲಪಕ್ಷಾರಂಭ, ಕಿರು ನವರಾತ್ರಿ ಆರಂಭ | 12-04-2018 | ಸರ್ವೈಕಾದಶಿ |
| | | 14-04-2018 | ಮೇಷ ಸಂಕ್ರಮಣ |
| | | 15-04-2018 | ಸೌರಮಾನ ಯುಗಾದಿ |
| | | 16-04-2018 | ಅಮಾವಾಸ್ಯೆ |
| 25-03-2018 | ಶ್ರೀ ರಾಮನವಮಿ, ಸಾಮೂಹಿಕ ದುರ್ಗಾ ನಮಸ್ಕಾರ ಪೂಜೆ | 17-04-2018 | ವಸಂತ ಋತು, ವೈಶಾಖ ಮಾಸ ಶುಕ್ಲಪಕ್ಷಾರಂಭ |
| 27-03-2018 | ಸರ್ವೈಕಾದಶಿ | 18-04-2018 | ಅಕ್ಷಯ ತೃತೀಯ |
| 31-03-2018 | ಹುಣ್ಣಿಮೆ | 20-04-2018 | ಶಂಕರ ಜಯಂತಿ, ಸಾಮೂಹಿಕ ಉಪನಯನ |

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894





ಎಮ್. ದೇವಾನಂದ್ ಭಟ್
Cell : 9845644556
9483913344
**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಮನವಿ

**ಮಾನ್ಯರೇ,**

ದಿನಾಂಕ 27–01–2018 ರಂದು ನಡೆದ ರಸ್ತೆ ದುರಂತದಲ್ಲಿ ನಮ್ಮ ಸಮಾಜದ ಉತ್ತಮ ವೈದಿಕರಲ್ಲಿ ಒಬ್ಬರಾದ ಬ್ರಹ್ಮಶ್ರೀ ಕಿಗ್ಗ ನಾಗಭೂಷಣ ಶಾಸ್ತ್ರೀಯವರ ದಾರುಣ ಮರಣವಾಗಿರುತ್ತದೆ ಎಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀ ಶಾಸ್ತ್ರಿಗಳು ನಮ್ಮ ಸಮಾಜದ ಹಲವಾರು ಮನೆಗಳಲ್ಲಿ ಶ್ರದ್ಧೆಯಿಂದ ಪೌರೋಹಿತ್ಯವನ್ನು ಮಾಡುತ್ತಿದ್ದುದು ಮಾತ್ರವಲ್ಲದೆ ನಮ್ಮ ಸಮಾಜದ ಹಲವಾರು ದೇವಸ್ಥಾನಗಳ ಬ್ರಹ್ಮಕುಂಭಾಭಿಷೇಕ ಮಹೋತ್ಸವ ಹಾಗೂ ವಾರ್ಷಿಕೋತ್ಸವಗಳಲ್ಲಿ ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ತಂಡದಲ್ಲಿ ಇದ್ದು ತಮ್ಮ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿರುವರು.

ಅವರು ಶೃಂಗೇರಿ ಸಮೀಪದ ಕಿಗ್ಗ ಗ್ರಾಮದಲ್ಲಿ ಅತೀ ಬಡಕುಟುಂಬದಲ್ಲಿ ಜನಿಸಿ ಬಾಲಕನಾಗಿರುವಾಗಲೇ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ ಕೋರಿಕೆಬೆಟ್ಟು ಮುಂಡ್ಕೂರುನಲ್ಲಿ ನಿತ್ಯಪೂಜೆಯ ಕೆಲಸಕ್ಕೆ ಬಂದು ಸೇರಿದರು. ಆ ಬಳಿಕ ತಮ್ಮ ಸ್ವಪ್ರಯತ್ನದಿಂದಲೇ ಪೌರೋಹಿತ್ಯ ಹಾಗೂ ಜ್ಯೋತಿಷ್ಯ ಶಾಸ್ತ್ರಗಳನ್ನು ಅಭ್ಯಾಸ ಮಾಡಿ ಪರಿಣತಿಯನ್ನು ಪಡೆದರು. ಅವರು ತಮ್ಮ ಕರ್ತವ್ಯಗಳನ್ನು ಭಕ್ತಿ ಶ್ರದ್ಧೆಗಳಿಂದ ನಿರ್ವಹಿಸಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಇವರಿಗೆ ಪ್ರಥಮ ಪಿ.ಯು.ಸಿಯಲ್ಲಿ ಕಲಿಯುವ ಒಬ್ಬ ಮಗ ಹಾಗೂ 3ನೇ ತರಗತಿಯಲ್ಲಿ ಕಲಿಯುವ ಒಬ್ಬಳು ಮಗಳು ಇರುತ್ತಾರೆ. ಅವರ ಪತ್ನಿಯು ಬಡಕುಟುಂಬದಿಂದ ಬಂದಿದ್ದು ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ಅವರು ತನ್ನ ಪತಿಯ ಉದ್ಯೋಗಕ್ಕೆ ಪೂರಕವಾಗಿ ದುಡಿದು ಒಬ್ಬ ಆದರ್ಶ ಗೃಹಿಣಿಯಾಗಿ ಗುರುತಿಸಿ ಕೊಂಡಿದ್ದಾರೆ.

ಅಕಾಲ ಮರಣದಿಂದ ಶ್ರೀ ನಾಗಭೂಷಣ ಶಾಸ್ತ್ರಿಗಳ ಕುಟುಂಬವು ಕಷ್ಟಕ್ಕೆ ಸಿಲುಕಿದೆ. ಈ ಸಂದರ್ಭದಲ್ಲಿ ಅವರ ಕುಟುಂಬಕ್ಕೆ ಸಹಾಯವನ್ನು ಮಾಡುವುದು ಸಮಾಜದ ಕರ್ತವ್ಯವಾಗಿರುತ್ತದೆ. ಇದನ್ನು ಮನಗಂಡು ದಿನಾಂಕ.02–03–2018 ರಂದು ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ವಠಾರದಲ್ಲಿ ಬ್ರಹ್ಮಶ್ರೀ ವಾಗೀಶ ಶಾಸ್ತ್ರೀ ನೇತೃತ್ವದಲ್ಲಿ ಸುಮಾರು 25 ಜನ ಸಮಾಜ ಬಾಂಧವರು ಸೇರಿ ಈ ಬಗ್ಗೆ ಚರ್ಚಿಸಿ ಈ ಕೆಳಗಿನಂತೆ ನಿರ್ಣಯವನ್ನು ಕೈಗೊಳ್ಳಲಾಗಿದೆ.

1. ಶ್ರೀ ನಾಗಭೂಷಣ ಶಾಸ್ತ್ರಿಗಳ ಅಪರ ಕ್ರಿಯೆಯನ್ನು ಅವರ ಮನೆಯಲ್ಲಿ ನೆರವೇರಿಸಿ 13ನೇ ದಿನದ ಶ್ರವಣಾರಾಧನೆ ಕಾರ್ಯಕ್ರಮ ಹಾಗೂ ಸಂತಾಪಸೂಚಕ ಸಭೆಯನ್ನು ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ ಕೋರಿಕೆಬೆಟ್ಟು ಮುಂಡ್ಕೂರಿನಲ್ಲಿ ನೆರವೇರಿಸುವುದು. ಇದಕ್ಕೆ ಬೇಕಾದ ಅಂದಾಜು ವೆಚ್ಚ ರೂ. 50,000/– ಸಮಾಜ ಬಾಂಧವರಿಂದ ಸಂಗ್ರಹಿಸಿ ಭರಿಸುವುದು. ಶ್ರೀ ಎಮ್.ಕೆ. ದಿವಾಕರ್ ರಾವ್, ಶ್ರೀ ಸುಧಾಕರ ಬೆಳ್ಳೆ, ಶ್ರೀ.ಬಿ.ಶಂಕರ್ ರಾವ್ ಇವರುಗಳು ಈ ಬಗ್ಗೆ ಮುತುವರ್ಜಿಯನ್ನು ವಹಿಸುವುದು.

2. ಈ ಕಾರ್ಯಕ್ರಮಗಳಾದ ಬಳಿಕ ಶ್ರೀ ಸುಧಾಕರ ಬೆಳ್ಳೆಯವರು ಶಾಸ್ತ್ರಿಗಳ ಬ್ಯಾಂಕ್, ಎಲ್.ಐ.ಸಿ ಮುಂತಾದ ವ್ಯವಹಾರಗಳನ್ನು ಪರಿಶೀಲಿಸಿ ಅವರ ಪತ್ನಿಗೆ ಸೂಕ್ತ ತಿಳುವಳಿಕೆಯನ್ನಿತ್ತು ಅದನ್ನು ವ್ಯವಸ್ಥಿತಗೊಳಿಸುವುದು.

3. ಶ್ರೀ ರವಿಕಿರಣ್, ವಕೀಲರು ಶ್ರೀ ಶಾಸ್ತ್ರಿಗಳಿಗೆ ವಾಹನ ವಿಮೆಯಿಂದ ಬರಬಹುದಾದ ಪರಿಹಾರವನ್ನು ದೊರಕಿಸಿ ಕೊಡಲು ಬೇಕಾದ ಕೋರ್ಟ್ ವ್ಯವಹಾರಗಳನ್ನು ನಡೆಸುವುದು.


4. ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ ಪಡುಬಿದ್ರೆಯ ನೇತೃತ್ವದಲ್ಲಿ ಬ್ರಹ್ಮಶ್ರೀ ಕಿಗ್ಗ ನಾಗಭೂಷಣ ಶಾಸ್ತ್ರಿ ಸ್ಮಾರಕ ಆಪತ್ ಪರಿಹಾರ ನಿಧಿ ಎಂಬ ಶಾಶ್ವತ ನಿಧಿಯೊಂದನ್ನು ರೂ.10.00 ಲಕ್ಷ ಬಂಡವಾಳದೊಂದಿಗೆ ಸ್ಥಾಪಿಸಲು ನಿರ್ಣಯಿಸಲಾಯಿತು. ಈ ನಿಧಿಯಿಂದ ಮುಂದಿನ ಐದು ವರ್ಷಗಳ ಕಾಲ ಅವಶ್ಯಕತೆಯನ್ನು ಮನಗಂಡು ದಿ.ಶಾಸ್ತ್ರಿಗಳ ಪತ್ನಿಗೆ ಧನಸಹಾಯವನ್ನು ನೀಡುವುದು ಹಾಗೂ ಆ ಬಳಿಕ ಈ ನಿಧಿಯಿಂದ ಸಮಾಜದ ಇತರೆ ಬಡಕುಟುಂಬಗಳ ಬಾಂಧವರಿಗೆ ಆಪತ್ ಕಾಲದಲ್ಲಿ ಸಹಾಯ ಒದಗಿಸಲು ಉಪಯೋಗಿಸುವುದು ಎಂದು ತೀರ್ಮಾನಿಸಲಾಯಿತು. ಆದುದರಿಂದ ಸಮಾಜ ಬಾಂಧವರು, ಸಂಘ–ಸಂಸ್ಥೆಗಳು ಈ ನಿಧಿಗೆ ಉದಾರವಾಗಿ ಸಹಾಯವನ್ನು ಮಾಡಬೇಕೆಂದು ವಿನಂತಿಸುತ್ತೇವೆ.

ಚೆಕ್/ಡಿಡಿ ಯನ್ನು ಕಿಗ್ಗ ನಾಗಭೂಷಣ ಶಾಸ್ತ್ರಿ ಸ್ಮಾರಕ ಆಪತ್ ಪರಿಹಾರ ನಿಧಿಯ ಹೆಸರಿನಲ್ಲಿ ಮಾಡಿ ಶ್ರೀ ಎಮ್.ಕೆ. ಮೋಹನ್ ರಾವ್, ಅಧ್ಯಕ್ಷರು, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ನಂದಗೋಕುಲ ಕಾರ್ಕಳ ರಸ್ತೆ, ಪಡುಬಿದ್ರೆ. ಈ ವಿಳಾಸಕ್ಕೆ ಕಳುಹಿಸಬೇಕೆಂದು ಅಪೇಕ್ಷಿಸಲಾಗಿದೆ.

**ಸಂಪರ್ಕ ಸಂಖ್ಯೆ : 9901395366** **– ಶ್ರೀ ಎಮ್.ಕೆ.ಮೋಹನ್ ರಾವ್, ಅಧ್ಯಕ್ಷರು.**

# ಶ್ರೀ ಬಿ.ವಿ.ರಾವ್‌ರವರಿಗೆ ಸನ್ಮಾನ

ತಾ.10–02–2018ರಂದು ಬೆಂಗಳೂರು ಯಲಹಂಕದ ನಿಟ್ಟೆ ಮೀನಾಕ್ಷಿ ತಾಂತ್ರಿಕ ವಿದ್ಯಾಲಯದಲ್ಲಿ ಬೆಂಗಳೂರಿನ ಶ್ರೀ ಬಿ.ವಿ.ರಾವ್ ಅವರಿಗೆ ಕವಿ ಸನ್ಮಾನ ಮಾಡಲಾಯಿತು. ವಿದ್ಯಾರ್ಥಿಗಳು ಬಿ.ವಿ.ರಾಯರ ಮೂರು ಕವನಗಳನ್ನು ಹಾಡಿದರು. ವಿದ್ಯಾಲಯ ಸಮೂಹದ ಮುಖ್ಯ ಸಲಹೆಗಾರರಾದ ಡಾ. ಯನ್.ಆರ್.ಶೆಟ್ಟಿ ಅವರು ಬಿ.ವಿ.ರಾಯರ ಕವನಗಳನ್ನು ಮೆಚ್ಚಿ ಮಾತನಾಡಿದರು. ಶ್ರೀ ಬಿ.ವಿ.ರಾಯರು ಮುಂಡ್ಕೂರು ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿದ್ದಾರೆ. ಅವರ ಹಲವಾರು ಭಕ್ತಿಗೀತೆಗಳು, ಭಾವಗೀತೆಗಳ ಸಂಕಲನ ಪ್ರಕಟಗೊಂಡಿವೆ. ಶ್ರೀ ಅನ್ನಪೂರ್ಣೇಶ್ವರಿಯನ್ನು ಆರಾಧಿಸಿ ಬರೆದ ಗೀತೆಗಳು ಸಿ.ಡಿ. ರೂಪದಲ್ಲಿಯೂ ಹೊರಬಂದಿದೆ.




# ಬ್ರಹ್ಮಶ್ರೀ ನಾಗಭೂಷಣ ಶಾಸ್ತ್ರಿ ನಿಧನ



ಪುರೋಹಿತರಾಗಿ ತಮ್ಮ ಸರಳ ಸ್ವಭಾವ ಹಾಗೂ ವಿದ್ವತ್ತಿನಿಂದ ಜನಪ್ರಿಯರಾಗಿದ್ದ ಶ್ರೀ ನಾಗಭೂಷಣ ಶಾಸ್ತ್ರಿಗಳು ತಾ.27–02–2018ರಂದು ಮಂಗಳೂರಿನ ಬಳಿ ನಡೆದ ರಸ್ತೆ ಅಫಘಾತವೊಂದರಲ್ಲಿ ತೀವ್ರವಾಗಿ ಗಾಯಗೊಂಡು ನಿಧನಹೊಂದಿದರು. ಅವರು ಪುತ್ತೂರು ತಾಲೂಕಿನ ದೇವಸ್ಥಾನವೊಂದರ ಜಾತ್ರಾಮಹೋತ್ಸವದಲ್ಲಿ ಭಾಗವಹಿಸಿ ಹಿಂದಿರುಗುತ್ತಿದ್ದಾಗ ಈ ಅವಘಡ ಸಂಭವಿಸಿತು. ಶ್ರೀಯುತರಿಗೆ 48 ವರ್ಷ ಪ್ರಾಯವಾಗಿತ್ತು. ಅವರು ಮೂಲತಃ ಕಿಗ್ಗಾದವರು. ನಮ್ಮ ಸಮಾಜದಲ್ಲಿ ಪುರೋಹಿತರಾಗಿ ಹಾಗೂ ಅನೇಕ ದೇವಸ್ಥಾನಗಳಿಗೆ ಮುಖ್ಯವಾಗಿ ಮುಂಡ್ಕೂರು ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಧಾರ್ಮಿಕ ಪೂಜಾವಿಧಿಗಳ ನೇತೃತ್ವ ವಹಿಸುತ್ತಿದ್ದರು. ಶ್ರೀಯುತರು ಶ್ರೀ ಶಾರದಾ ಮಂಟಪದಲ್ಲಿ ನೆರವೇರುತ್ತಿದ್ದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಸಹಕಾರವಿತ್ತುದ್ದನ್ನು ನಾವು ಮರೆಯುವಂತಿಲ್ಲ. ಶ್ರೀಯುತರ ಅಕಾಲ ನಿಧನಕ್ಕೆ ಕಂಬನಿ ಮಿಡಿಯುತ್ತಾ, ಅವರ ಕುಟುಂಬದವರಿಗೆ ಶ್ರೀದೇವರು ಅವರ ವಿಯೋಗದ ದುಃಖ ಕಷ್ಟಗಳನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.



# ಹೆಚ್.ವಿ.ರಮೇಶಚಂದ್ರ ರಾವ್ ನಿಧನ

ತಾ.23–02–2018ರಂದು ಕೊಡಿಪ್ಪಾಡಿ ಓಟೆ ಕುಟುಂಬದ ಪ್ರೊ| ಹೆಚ್.ವಿ.ರಮೇಶಚಂದ್ರ ರಾವ್ ನಿಧನ ಹೊಂದಿದರು. ಅವರು ಕಿಟ್ಟೆಲ್ ಕಾಲೇಜು, ಧಾರವಾಡದಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ನಿಧನ ಸಮಯದಲ್ಲಿ ಅವರಿಗೆ 85 ವರ್ಷ ಪ್ರಾಯವಾಗಿತ್ತು.

# ಶ್ರೀ ಶಂಕರಜಯತಿ "ರಾಜ್ಯಮಟ್ಟದ ಪ್ರಬಂಧಸ್ಪರ್ಧೆಗೆ ಆಹ್ವಾನ"

ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾಪೀಠದ ‘ಶಾಂಕರತತ್ತ್ವ ಪ್ರಸಾರ ಅಭಿಯಾನ’ದ ಅಂಗವಾಗಿ ಇಲ್ಲಿನ ಶ್ರೀ ಕುಂದೇಶ್ವರ ದೇವಸ್ಥಾನವು ಕುಂದಾಪುರ ತಾಲೂಕು ಬ್ರಾಹ್ಮಣ ಪರಿಷತ್ತಿನ ಕುಂದಾಪುರ ವಲಯದ ಸಹಭಾಗಿತ್ವದೊಂದಿಗೆ 2018ರ ಶಂಕರಜಯಂತಿ ಆಚರಣೆ ಸಂದರ್ಭದಲ್ಲಿ ಸಾರ್ವಜನಿಕರಿಗಾಗಿ ಪ್ರಬಂಧ ಸ್ಪರ್ಧೆಯೊಂದನ್ನು ಏರ್ಪಡಿಸಿದೆ.

ಆಸಕ್ತರು ‘ಭಾರತೀಯ ತತ್ತ್ವಜ್ಞಾನ ಕ್ಷೇತ್ರಕ್ಕೆ ಆದಿಶಂಕರರ ಕೊಡುಗೆ’ ಕುರಿತು ಫುಲ್‌ಸ್ಕೇಪ್ ಕಾಗದದಲ್ಲಿ ಹತ್ತು ಪುಟಗಳಿಗೆ ಮೀರದಂತೆ ಕನ್ನಡದಲ್ಲಿ ಪ್ರಬಂಧವೊಂದನ್ನು ಬರೆದು ಏಪ್ರಿಲ್ 10ರ ಒಳಗೆ ‘ಅಧ್ಯಕ್ಷರು. ವ್ಯವಸ್ಥಾಪನ ಸಮಿತಿ, ಶ್ರೀ ಕುಂದೇಶ್ವರ ದೇವಸ್ಥಾನ, ಕುಂದಾಪುರ–576201, ಉಡುಪಿ ಜಿಲ್ಲೆ’– ಇವರಿಗೆ ತಲುಪಿಸಬೇಕು.

ಸ್ಪರ್ಧೆಯಲ್ಲಿ ಉತ್ತೀರ್ಣರಾದ ಮೂರು ಮಂದಿಗೆ ಏಪ್ರಿಲ್ 20ರ ಸಂಜೆ ಶ್ರೀ ಕುಂದೇಶ್ವರ ದೇವಾಲಯದ “ಶಂಕರಕೃಪಾ’ ಪ್ರವಚನ ಮಂದಿರದಲ್ಲಿ ನಡೆಯುವ ಧಾರ್ಮಿಕ ಸಭೆಯಲ್ಲಿ ಅನುಕ್ರಮವಾಗಿ ಮೂರು ನಗದು ಬಹುಮಾನಗಳನ್ನು ನೀಡಿ ಗೌರವಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಆಮಂತ್ರಣ

ಶ್ರೀ ಮಹಿಷಮರ್ಧಿನಿ ದಶಾವತಾರ ಯಕ್ಷಗಾನ ಮೇಳ ನೀಲಾವರ ಇವರಿಂದ ತಾ.07.04.2018ನೇ ಶನಿವಾರ ರಾತ್ರಿ ಮೂಡು ಅಲೆವೂರಿನ ಮಾತೃಶ್ರೀ ನಿಲಯದ ವಠಾರದಲ್ಲಿ "ಮಹಾಮಂತ್ರಿ ದುಷ್ಟಬುದ್ಧಿ" ಎಂಬ ಪೌರಾಣಿಕ ಯಕ್ಷಗಾನ ಪ್ರದರ್ಶನ ನಡೆಯಲಿರುವುದು. ಸಮಾಜ ಬಾಂಧವರನ್ನು ಈ ಕಾರ್ಯಕ್ರಮಕ್ಕೆ ಆಮಂತ್ರಿಸುವ

**ಶ್ರೀಮತಿ ಶ್ರೀದೇವಿ ಮತ್ತು ಶ್ರೀ ಶ್ರೀಕಾಂತ ರಾವ್**

"ಮಾತೃಶ್ರೀ", ಮೂಡು ಅಲೆವೂರು, ಉಡುಪಿ. ಮೊಬೈಲ್ : 9449104703

**SAMPATH KUMAR** Mobile : 9741508881

**TRISHULINI TOURIST**

*The Tourist People*

Near Mahishamardhini Temple, Bailur, Udupi.

**ALL TYPES OF VEHICLES AVAILABLE FOR HIRE**

**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

# ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ ಬೆಂಗಳೂರು

**ಜ್ಞಾನಶಕ್ತಿ ನಗರ ಅಂಚೆ ಕೊಡಿಗೆಹಳ್ಳಿ, ಬೆಂಗಳೂರು.**

## ಭಾವೀ ವಧೂವರರ ಸಮಾವೇಶ

ಪ್ರಿಯ ಸಮಾಜ ಬಾಂಧವರೇ,

ನಮ್ಮ ಸಮಾಜದ ಅಭಿವೃದ್ಧಿಯಲ್ಲಿ ಬಹು ಮುಖ್ಯ ಪಾತ್ರ ವಹಿಸುವಂತಿದ್ದು ನಮ್ಮೊಳಗೇ ನಡೆಯುವ ಮದುವೆಗಳು ಎನ್ನುವುದು ನಮ್ಮೆಲ್ಲರಿಗೂ ವೇದ್ಯವಾದ ವಿಚಾರವೇ ಆಗಿದೆ. ಈ ವಿಷಯದಲ್ಲಿ ನಮ್ಮ ಸಮಾಜದಲ್ಲಿನ ಎಲ್ಲಾ ಚಿಂತಕರು ಗಂಭೀರವಾಗಿ ಯೋಚಿಸುತ್ತಿರುವುದಕ್ಕೆ ನಮ್ಮಲ್ಲಿ ಕಾಲಕಾಲಕ್ಕೆ ಅಯಾ ಸಂಘಗಳು ಭಾವೀ ವಧೂವರರ ಸಮಾವೇಶವನ್ನು ಆಯೋಜಿಸುತ್ತಿರುವುದು ಮತ್ತು ವಿವಾಹ ವಿಚಾರಕ್ಕಾಗಿಯೇ ಪ್ರತ್ಯೇಕ ಸಮಿತಿಯನ್ನು ರಚಿಸಿಕೊಂಡು ಸಂಬಂಧ ಸೇತುವಾಗುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿರುವುದೇ ಸಾಕ್ಷಿಯಾಗಿದೆ. ಅಂತಹುದೇ ಪ್ರಯತ್ನದ ಅಂಗವಾಗಿ ದಿನಾಂಕ 01.04.2018ರ ಭಾನುವಾರದಂದು ಭಾವೀ ವಧೂ-ವರರ ಸಮಾವೇಶವನ್ನು ಆಯೋಜಿಸುವುದಾಗಿ ಸಂಕಲ್ಪಿಸಿದ್ದೇವೆ. ತಮ್ಮಲ್ಲಿ ವಿವಾಹಯೋಗ್ಯ ವಧೂ-ವರರಿದ್ದಲ್ಲಿ ಈ ಸಮಾವೇಶದಲ್ಲಿ ಪಾಲ್ಗೊಂಡು ಮತ್ತು ಈ ವಿಷಯವನ್ನು ತಮ್ಮ ವ್ಯಾಪ್ತಿಯಲ್ಲಿರುವ ವಿವಾಹಕಾಂಕ್ಷಿಗಳಲ್ಲಿ ಪ್ರಚುರಪಡಿಸಿ ಅವರನ್ನೂ ಇದರಲ್ಲಿ ಪಾಲ್ಗೊಳ್ಳುವಂತೆ ಮಾಡಿ ಈ ಕಾರ್ಯಕ್ರಮವನ್ನು ಫಲಪ್ರದಗೊಳಿಸುವಲ್ಲಿ ಸಹಕರಿಸಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತಿದ್ದೇವೆ.

ಬೆಂಗಳೂರಿನ ಹೊರಗಿನ ಪ್ರದೇಶದಿಂದ ಹಿಂದಿನ ದಿವಸ ಬರುವವರಿದ್ದರೆ ಮೊದಲೇ ತಿಳಿಸಿದಲ್ಲಿ ಜ್ಞಾನಶಕ್ತಿ ಮಂಟಪದಲ್ಲಿ ಉಳಿದುಕೊಳ್ಳಲು ವಸತಿ ವ್ಯವಸ್ಥೆ ಕಲ್ಪಿಸಲಾಗುವುದು.

**ಹೆಚ್ಚಿನ ಮಾಹಿತಿ ಮತ್ತು ಅಭ್ಯರ್ಥಿಗಳು ಬರುವಾಗ ತರಬೇಕಾಗಿರುವ ವಿವರಗಳಿಗಾಗಿ ಸಂಪರ್ಕಿಸಿ :**

- ಶ್ರೀ ಎ. ಶಿವರಾವ್ 9880570747.
- ಶ್ರೀಮತಿ ಪಿ ಮಾಲತಿ ರಾವ್ 9886924913.
- ಶ್ರೀಮತಿ ಬಿ. ವಿದ್ಯಾರಾವ್ 9731015176

**ಕಾರ್ಯಕ್ರಮಗಳ ವಿವರ :**

- ಬೆಳಿಗ್ಗೆ 9.00 ರಿಂದ 9.30 ರವರೆಗೆ ಭಾವೀ ವಧೂವರರ ನೋಂದಣಿ
- 9.30 ರಿಂದ 10.30 ರವರೆಗೆ ಕಾರ್ಯಕ್ರಮದ ಉದ್ಘಾಟನೆ ಮತ್ತು ಭಾವೀ ವಧೂವರರರಿಂದ ಸ್ವಯಂ ಪರಿಚಯ
- 10.30 ರಿಂದ ಅಪರಾಹ್ನ 12.30 ರವರೆಗೆ ಪರಸ್ಪರ ಬೆರೆಯುವಿಕೆ ಮತ್ತು ವಿಚಾರ ವಿನಿಮಯ
- ಅಪರಾಹ್ನ 12.30 ರಿಂದ 2.00 ರವರೆಗೆ ಪೂಜೆ ಮತ್ತು ಭೋಜನ ವಿರಾಮ.
- 2.00 ರಿಂದ 3.30 ರವರೆಗೆ ಪರಸ್ಪರ ಬೆರೆಯುವಿಕೆ ಮತ್ತೆ ವಿಚಾರ ವಿನಿಮಯ ಮುಂದುವರೆಯುವುದು.
- 3.30 ರಿಂದ 4.00 ರವರೆಗೆ ಕಾರ್ಯಕ್ರಮದ ಭಾಗಿಗಳಿಂದ ಪ್ರತಿಕ್ರಿಯೆ ಸಲಹೆ ಸೂಚನೆಗಳು
- 4.00 ಕ್ಕೆ ಕಾರ್ಯಕ್ರಮದ ಮುಕ್ತಾಯ

**ಮುಂಚಿತವಾಗಿ ನೋಂದಾಯಿಸಲು ನಮ್ಮ ಅಂತರ್ಜಾಲ sthanika.infoಗೆ ಭೇಟಿ ನೀಡಿ**

**-ವೈವಾಹಿಕ ವಿಚಾರ ಸಮಿತಿ, ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ ಬೆಂಗಳೂರು**

---

# ಅತ್ತ ಇತ್ತ ಸುತ್ತಮುತ್ತ

**ಶ್ರೀ ವೈ. ಮೋಹನ ರಾವ್ ಇವರ ಬರಹಗಳ ಸಂಕಲನ**

ಇದರ

**ಪುಸ್ತಕ ಬಿಡುಗಡೆ ಕಾರ್ಯಕ್ರಮವು**

ತಾ.25-03-2018ನೇ ಆದಿತ್ಯವಾರದಂದು ಸಂಜೆ ಗಂಟೆ 4-00ಕ್ಕೆ ಪಾವಂಜೆ ಶ್ರೀ ಜ್ಞಾನಶಕ್ತಿಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ ಶಾರಧ್ವತ ಸಭಾಂಗಣದಲ್ಲಿ ಜರಗಲಿರುವುದು.

**ಸಭಾ ಕಾರ್ಯಕ್ರಮ**

ಪುಸ್ತಕ ಬಿಡುಗಡೆ ಮಾಡುವವರು : **ಶ್ರೀ ಎಮ್. ಶಶೀಂದ್ರ ಕುಮಾರ್**
ಆಡಳಿತ ಮೊಕ್ತೇಸರರು, ಶ್ರೀ ಜ್ಞಾನಶಕ್ತಿಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ಪಾವಂಜೆ

ಅಧ್ಯಕ್ಷತೆ : **ಡಾ। ಯಾಜಿ ನಿರಂಜನ ಭಟ್**
ಧರ್ಮದರ್ಶಿಗಳು, ಶ್ರೀ ಜ್ಞಾನಶಕ್ತಿಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ಪಾವಂಜೆ

ಉಪಸ್ಥಿತಿ : **ಶ್ರೀ ನಕ್ರೆ ಬಾಲಕೃಷ್ಣ ರಾವ್**
ಪ್ರಧಾನ ಕಾರ್ಯದರ್ಶಿ, ಬ್ರಹ್ಮಕಲಶೋತ್ಸವ ಸಮಿತಿ,
ಶ್ರೀ ಜ್ಞಾನಶಕ್ತಿಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ಪಾವಂಜೆ

ಅತಿಥಿಗಳು : **ಶ್ರೀ ಅಶ್ವತ್ಥ್ ಭಾರದ್ವಾಜ ಕಬ್ಬಿನಾಲೆ**
ಕನ್ನಡ ಉಪನ್ಯಾಸಕರು, ಪೂರ್ಣಪ್ರಜ್ಞ ಪದವಿಪೂರ್ವ ಕಾಲೇಜು, ಉಡುಪಿ.

**ಶ್ರೀ ಎಸ್. ನಿತ್ಯಾನಂದ ಪಡ್ರೆ**
ನಿವೃತ್ತ ಹಿರಿಯ ಉಪಸಂಪಾದಕರು, ಉದಯವಾಣಿ, ಮಣಿಪಾಲ

**ಶ್ರೀ ವೈ. ಧೀರಜ್ ರಾವ್ ಬೆಂಗಳೂರು**
ಲವ್ ಯು ಮೋಮ್ ಕ್ರಿಯೇಷನ್ಸ್, ಇಂಜಿನಿಯರ್, ಡೈರೆಕ್ಟರ್ ಮತ್ತು ಸಂಯೋಜಕರು

ಕಾರ್ಯಕ್ರಮ ನಿರ್ವಾಹಕರು : **ಶ್ರೀ ರಾಮ ಭಟ್ ಎಸ್.,** ಅತಿಥಿ ಉಪನ್ಯಾಸಕರು
ಮದರ್ ತೆರೆಸಾ ಪದವಿ ಪೂರ್ವ ಕಾಲೇಜು, ಶಂಕರನಾರಾಯಣ, ಕುಂದಾಪುರ

ತಮಗೆಲ್ಲರಿಗೂ ಆದರದ ಸ್ವಾಗತ ಬಯಸುವ :

**ಬ್ರಹ್ಮಗಿರಿ ಪ್ರಕಾಶನ**

'ದೃಷ್ಟಿ', 3-2-28ಎ-1 ಸಿ.ಪಿ.ಸಿ. ಲೇ-ಔಟ್, ಎರಡನೇ ಅಡ್ಡರಸ್ತೆ,
ಶ್ರೀ ಪ್ರಸನ್ನ ಗಣಪತಿ ಮಂದಿರ ರಸ್ತೆ, ಶ್ಯಾಮಿಲಿ ಬಳಿ, ಅಂಬಲಪಾಡಿ, ಉಡುಪಿ, ಕರ್ನಾಟಕ-576 103.

---

ಸಮಾಜ ಬಾಂಧವರೇ,

ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಪಾದೆಬೆಟ್ಟು ಇಲ್ಲಿ ವರ್ಷಂಪ್ರತಿ ನಡೆಯುವಂತೆ
**ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಪಡುಬಿದ್ರೆ ಮತ್ತು ಶ್ರೀ ವಿಷ್ಣುಮೂರ್ತಿ ದೇವಸ್ಥಾನ (ರಿ)**
**ಪಾದೆಬೆಟ್ಟು ಇದರ ಸಂಯೋಜನೆಯಲ್ಲಿ**
**ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ**
**ಶ್ರೀ ಕೃಷ್ಣರಾಜ ಭಟ್ ಹೆಜಮಾಡಿ ಇವರ ನೇತೃತ್ವದಲ್ಲಿ**
**ತಾರೀಕು 17-04-2018 ರಿಂದ 28-04-2018 ರವರೆಗೆ ಶ್ರೀ ದೇವಳದಲ್ಲಿ.**

## "ವೈದಿಕ ಶಿಬಿರ"ವು

ನಡೆಯಲಿದ್ದು ನಮ್ಮ ಸಮಾಜದ ಎಲ್ಲಾ ವಟುಗಳು ಭಾಗವಹಿಸಿ
ಈ ಶಿಬಿರದ ಪ್ರಾಯೋಜನವನ್ನು ಪಡೆದುಕೊಳ್ಳಬೇಕಾಗಿ ಆಶಿಸುತ್ತೇವೆ.

**- ಆಡಳಿತ ಮಂಡಳಿ,** ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಪಾದೆಬೆಟ್ಟು ಮತ್ತು ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಪಡುಬಿದ್ರೆ.

**ಈ ಶಿಬಿರದ ಪ್ರಧಾನ ಪ್ರಾಯೋಜಕರು :**
**ಎಲ್ಲೂರು ಶ್ರೀ ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಯ ಮೆಮೋರಿಯಲ್ ಟ್ರಸ್ಟ್ (ರಿ)**
**ಮತ್ತು ಇನ್ನ ಎ.ಬಿ.ಸಿ.ಡಿ & ಇ ಟ್ರಸ್ಟ್ (ರಿ). ಇನ್ನ**

**ವಿಶೇಷ ಸೂಚನೆ :**

1. ವಟುಗಳು ಸಂಧ್ಯಾವಂದನೆಗೆ ಬೇಕಾದ ಪಂಚಪಾತ್ರೆ ಹಾಗೂ ಸ್ವಂತಕ್ಕೆ ಬೇಕಾದ ವಸ್ತ್ರಗಳನ್ನು ತರಬೇಕು.
2. ಕಳೆದ ಬಾರಿ ಕೊಟ್ಟ ಪುಸ್ತಕವನ್ನು ತರಬೇಕು.
3. ಮೊಬೈಲ್ ಫೋನ್ ಕಡ್ಡಾಯವಾಗಿ ನಿಷೇಧಿಸಲಾಗಿದೆ. (ವಟುಗಳು ಹೆತ್ತವರೊಂದಿಗೆ ಮಾತಾನಾಡಲು ಬಯಸಿದರೆ ಉಚಿತ ದೂರವಾಣಿ ಇದೆ).
4. ಸಮಾಜ ಬಾಂಧವರು ಜಪ ಹಾಗೂ ಪೂಜಾಕೈಂಕರ್ಯಗಳನ್ನು ಕಲಿಯಲು ಇಚ್ಛಿಸಿದ್ದಲ್ಲಿ (ಸಮಾಜ ಹಾಗೂ ವಯಸ್ಸಿನ ನಿರ್ಬಂಧನೆ)ಗಳಿಲ್ಲದೆ ಕಲಿಸಿಕೊಡುವ ವ್ಯವಸ್ಥೆ ಇದೆ.

ಹೆಚ್ಚಿನ ಮಾಹಿತಿಗಾಗಿ :
ಶ್ರೀ ಕೃಷ್ಣರಾಜ ಭಟ್-9980195355 ; ಶ್ರೀ ಜಯರಾಮ ರಾವ್-9743159540
ಶ್ರೀಮತಿ ವಿಜಯ ದೇವ ರಾವ್-9663001773 ; ಡಾ.ಸುದರ್ಶನ್ ರಾವ್-9845136322
ಶ್ರೀ ಲಕ್ಷ್ಮೀಕಾಂತ ರಾವ್-9448156413 ; ಶ್ರೀ ಎಮ್ .ಕೆ. ದಿವಾಕರ್ ರಾವ್-9902169119
ಶ್ರೀ ಸುಧಾಕರ್ ಬೆಳ್ಳೆ-9845193103

---

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ
ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ
ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ
ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-30ರಿಂದ

**ತಾ.03-04-2018 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.06-04-2018 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.22-03-2018, ತಾ.05-04-2018 ಮತ್ತು ತಾ.20-04-2018 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

---

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯೆಶೆಸ್ಸೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams




**RAJESH POWER PRESS**
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

**QUALITY FIRST AND ALWAYS**

# ವ್ಯಕ್ತಿ ಪರಿಚಯ : ಅದ್ಯಪಾಡಿ ಪದ್ಮನಾಭ ಯಶವಂತ ಶರ್ಮ (ಅ.ಪ.ಯ.ಶ)



'ಅಪಯಶ' ವೆಂಬ ಅಂಕಿತನಾಮದಲ್ಲಿ ಲೇಖನಗಳನ್ನು ಬರೆಯುವ ಎ.ಪಿ.ಯಶವಂತ ಶರ್ಮರು 1924 ರಲ್ಲಿ ಕಾರ್ಕಳದಲ್ಲಿ ಜನಿಸಿದರು. ಇವರ ತಂದೆ ಎಲ್ಲೂರು ಕಾಶಿ ಸಂತಾನಕ್ಕೆ ಸೇರಿದ ಎ.ಪದ್ಮನಾಭ ಶರ್ಮ–ತಾಯಿ ಪೊಳಲಿ ನಟ್ಟೋಜ ಮನೆತನದ ಸೀತಮ್ಮ–ಎಲ್ಲೂರಿಂದ ಹೊರಬಂದ ಹಿರಿಯರು ಅದ್ಯಪಾಡಿಯಲ್ಲಿ ನೆಲೆಸಿದ್ದರು. ಮುಂದೆ ಕಾರ್ಕಳಕ್ಕೆ ಸ್ಥಳಾಂತರಗೊಂಡ ಈ ದಂಪತಿಗಳ ಏಳುಗಂಡು ನಾಲ್ಕು ಹೆಣ್ಣು ಮಕ್ಕಳಲ್ಲಿ ಯಶವಂತ ಶರ್ಮರು ಹಿರಿಯ ಮಗ. ಪ್ರಾಥಮಿಕ ಮತ್ತು ಹೈಸ್ಕೂಲ್ ವಿದ್ಯಾಭ್ಯಾಸವನ್ನು ಕಾರ್ಕಳದಲ್ಲಿ ಮುಗಿಸಿ, ಎರಡು ವರ್ಷಗಳ ಶಿಕ್ಷಕ ತರಬೇತಿಯನ್ನು ಮಂಗಳೂರಿನಲ್ಲಿ ಪಡೆದರು. ಹದಿನೆಂಟರ ಹರೆಯದ ಮೊದಲೇ ಕುಕ್ಕುಂದೂರು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕನಾಗಿ ಜೀವನ ಆರಂಭಿಸಿ ಕಡುಬಡತನದಲ್ಲಿದ್ದ ತನ್ನ ದೊಡ್ಡಕುಟುಂಬಕ್ಕೆ ಆಧಾರಸ್ಥಂಭವಾದರು. ಆರೇಳು ವರ್ಷ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ಈ ಆದರ್ಶ ಶಿಕ್ಷಕನನ್ನು ಹಳೆಯ ವಿದ್ಯಾರ್ಥಿಗಳು/ಸ್ಥಳೀಕರು ಸ್ಮರಿಸಿ ಹತ್ತಿಪ್ಪತ್ತು ವರ್ಷಗಳ ಹಿಂದೆ ಶಾಲಾ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿ ವಿಶೇಷವಾಗಿ ಸನ್ಮಾನಿಸಿದ್ದು ಉಲ್ಲೇಖನೀಯ ಮುಂದಕ್ಕೆ ಖಾಸಗಿಯಾಗಿ ಇಂಟರ್‌ಮೀಡಿಯೇಟ್, ಬಿ.ಎ. ಪರೀಕ್ಷೆಗಳನ್ನು ಪಾಸುಮಾಡಿ 1956ರಲ್ಲಿ ಶಿಕ್ಷಕ ವೃತ್ತಿ ತೊರೆದು ಜೀವವಿಮಾ ನಿಗಮದ ಉಡುಪಿ ವಿಭಾಗ ಕಛೇರಿಯಲ್ಲಿ ಅಸಿಸ್ಟೆಂಟ್ ಹುದ್ದೆ ಪಡೆದರು. ಉದ್ಯೋಗದೊಂದಿಗೆ ಸಂಬಂಧಪಟ್ಟ ಎಸೋಸಿಯೇಟ್ ಮತ್ತು ಫಲೋಶಿಪ್ ಪರೀಕ್ಷೆ ಪಾಸಾಗಿ, ಉಡುಪಿ ಕಾನೂನು ಕಾಲೇಜಿನ ಸಾಯಂಕಾಲದ ತರಗತಿಗಳಿಗೆ ಹಾಜರಾಗಿ ಕರ್ನಾಟಕ ವಿಶ್ವವಿದ್ಯಾಲಯದ ಎಲ್.ಎಲ್.ಬಿ ಪದವಿ ಪಡೆದರು. 1965 ರಲ್ಲಿ ಉದ್ಯೋಗ ಬಡ್ತಿಹೊಂದಿ ಮಂಗಳೂರಿನಲ್ಲಿ ಜೀವವಿಮಾ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಇವರ ವ್ಯವಹಾರ ವೈಖರಿಗೆ ಅಂದಿನ ವಿಮಾನಿಗಮದ ಛೇರ್ಮನ್ ಶ್ರೀ.ಟಿ.ಎ. ಪೈಯವರಿಂದ ಪ್ರಶಂಸಾ ಪತ್ರ ಲಭಿಸಿದೆ. 1970 ರ ದಶಕದ ಉತ್ತರಾರ್ಧದಲ್ಲಿ ಅಭಿವೃದ್ಧಿ ಅಧಿಕಾರಿ ವರ್ಗಕ್ಕೆ ಸಂಕಷ್ಟ ಕಾಲವಿದ್ದಾಗ, ಸಂಘದ ಪದಾಧಿಕಾರಿಯಾಗಿ ದೇಶವ್ಯಾಪಿ ಎರಡುಮೂರು ಬಾರಿ ಸಂಚರಿಸಿ ಪ್ರತಿಭಟನಾ ಸಭೆಗಳನ್ನು ನಡೆಸಿ ಪಾರ್ಲಿಮೆಂಟ್ ಭವನದ ಮುಂದೆ ಚಳವಳಿ/ಧರಣಿಗಳಲ್ಲಿ ಭಾಗವಹಿಸಿದ್ದು, ತನಗೆ ಆರ್ಥಿಕ ಸಂಕಷ್ಟ ಒದಗಿದರೂ ಎದೆಗುಂದದೆ ನೌಕರರ ಬೇಡಿಕೆಯನ್ನು ಸರಕಾರಕ್ಕೆ ಮನದಟ್ಟು ಮಾಡುವಲ್ಲಿ ಅವರು ಪಟ್ಟ ಶ್ರಮ ಅವಿಸ್ಮರಣೀಯ. 1978ರಲ್ಲಿ ದಾವಣಗೆರೆ ಕಛೇರಿಗೆ ವರ್ಗಾವಣೆಗೊಂಡು 1992 ರಲ್ಲಿ ನಿವೃತ್ತನಾಗುವವರೆಗೆ ವಿಮಾಕ್ಷೇತ್ರದ ಅಭಿವೃದ್ಧಿಗಾಗಿ ಅತ್ಯುತ್ತಮವಾಗಿ ದುಡಿದು ನಿಗಮದಿಂದ ಹಾಗೂ ಸಾರ್ವಜನಿಕರಿಂದ ಶ್ಲಾಘಿಸಲ್ಪಟ್ಟಿದ್ದಾರೆ. ಇವರ ಅಭಿವೃದ್ಧಿಯಲ್ಲಿ ಪಾಲುದಾರಳಾದ ಪತ್ನಿ ಸೌ। ಅಹಲ್ಯಾ ಶರ್ಮರನ್ನು ಇಲ್ಲಿ ಸ್ಮರಿಸ ಬೇಕಾಗಿದೆ. 1960ರಲ್ಲಿ ಬಜೆ ಲಕ್ಷ್ಮೀನಾರಾಯಣ–ಜಲಜಾಕ್ಷಿ ದಂಪತಿಗಳ ಪುತ್ರಿ ಸೌ। ಅಹಲ್ಯಾರನ್ನು ವಿವಾಹವಾದ ಇವರಿಗೆ ಒಬ್ಬಳು ಪುತ್ರಿ–ಮೂವರು ಪುತ್ರರಿದ್ದಾರೆ. ಕಷ್ಟ ಕಾಲದಲ್ಲಿಯೂ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಿ ಅವರ ಜೀವನ ಮಾರ್ಗಕ್ಕೆ ದಾರಿದೀಪವಾದರು. ಮಗಳು ಸೌ। ಆರತಿ ಬ್ಯಾಂಕ್ ಉದ್ಯೋಗಿಯಾಗಿದ್ದು ಇತ್ತೀಚೆಗೆ ಸ್ವಯಂ ನಿವೃತ್ತಿ ಪಡೆದು ಪತಿ ಕರಂದಾಡಿ ರಮಾನಾಥರಾಯರೊಂದಿಗೆ ಸಂತೃಪ್ತ ಜೀವನ ನಡೆಸುತ್ತಿದ್ದಾರೆ. ಪುತ್ರರಾದ ಶಿವಪ್ರಕಾಶ್, ಜೀವನಪ್ರಕಾಶ್ ಹಾಗೂ ಬಾಲಸುಬ್ರಹ್ಮಣ್ಯರು ದೊಡ್ಡ ಹುದ್ದೆಗಳಲ್ಲಿದ್ದು, ಸಂತೃಪ್ತ ಸಂಸಾರ ಜೀವನ ಅನುಭವಿಸುತ್ತಿದ್ದಾರೆ. ಪತ್ನಿ ಸೌ। ಅಹಲ್ಯಾರಂತೂ, ಮಹಿಳಾಸಮಾಜದಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಾ ನೆರೆಕರೆಯ ಹೆಣ್ಮಕ್ಕಳಿಗೆ 'ಭಕ್ತಿಗೀತೆ'ಗಳ ತರಬೇತಿ ಕೊಡುತ್ತಾ ಸಂತಸದಿಂದ ಸಂಸಾರ ನಿಭಾಯಿಸುತ್ತಿದ್ದಾರೆ. ಬೆಂಗಳೂರಿನ ಸದಾನಂದ ನಗರದ 'ಸಂಪೂರ್ಣ' ಮನೆಯಲ್ಲಿ ಸದಾ ಆನಂದದಲ್ಲಿ ನಿವೃತ್ತಿ ಜೀವನ ನಡೆಸುತ್ತಾ ಆಧ್ಯಾತ್ಮಿಕ 'ಸಂಪೂರ್ಣ'ದತ್ತ ಸಾಗುತ್ತಿದ್ದಾರೆ–ನಮ್ಮ ಅಪಶಯರು.

'ಅಪಶಯ'ರ ಸಾಹಿತ್ಯ ಕೃಷಿ ಬಗ್ಗೆ: ಶ್ರೀ ಯಶವಂತ ಶರ್ಮರು ತಮ್ಮ ಬರವಣಿಗೆಯನ್ನು ವೃತ್ತಿಯಿಂದ ನಿವೃತ್ತಿಯಾದ ಮೇಲೆಯೇ ಕೈಗೊಂಡರು. ಬೆಳ್ಳಿಂಗಡಿಯ ಸಮಾರಂಭವೊಂದರಲ್ಲಿ, ನೇತಾಜಿ ಸುಭಾಶ್ಚಂದ್ರ ಬೋಸ್‌ರವರ ನಿಕಟವರ್ತಿಯಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸ್ಥಾನಿಕ ವೀರ ಉಜಿರೆ ಸುಂದರ ರಾಯರನ್ನು ಭೇಟಿಯಾದಾಗ ಅವರ ಹೋರಾಟದ ರೋಚಕ ಅನುಭವಗಳನ್ನು ಕೇಳಿಬರೆದ 'ವ್ಯಕ್ತಿ ಚಿತ್ರಣ' ಸ್ಥಾನಿಕ ಪತ್ರಿಕೆಯಲ್ಲಿ ಪ್ರಕಟಗೊಂಡಿತ್ತು. ತದನಂತರ ಬರೆದ 'ಯಾಣಗಾನ', 'ಶೃಂಗೇರಿವೈಭವಮ್' ಕೋದಂಡ ರಾಮಾಯಣ, ತಜ್ಞ–ಯಜ್ಞ ಮೊದಲಾದ ಕವಿತೆ, ಕಾವ್ಯ, ಹನಿಗವನ, ಮಿನಿಗವನ, ವಿಡಂಬನ ಕವಿತೆಗಳು ನಮ್ಮ ಸಮಾಜದ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಲೇ ಬಂದವು. ಶ್ರೀ ಶಂಕರ ಭಗವತ್ಪಾದ ಚರಿತಾಮೃತಮ್ ಮತ್ತು 'ಸತ್ಯದರ್ಶನ' ಎಂಬ ಎರಡು ಕಿರು ಹೊತ್ತಗೆಗಳನ್ನು ಸುಲಭ ಸರಳ ಕನ್ನಡದಲ್ಲಿ ಬರೆದು ಪ್ರಕಟಿಸಿದರು. 'ಶಿವಮಾನಸ ಪೂಜಾ ಸ್ತೋತ್ರ' ಮತ್ತು 'ಶಿವಾಪರಾಧಕ್ಷಮಾಪಣಾ ಸ್ತೋತ್ರ'ಗಳ ಕನ್ನಡ ರೂಪಾಂತರ ಸಹಿತ, ಕೃತಿಗಳೆಲ್ಲಾ ಓದುಗರಿಂದ ಮೆಚ್ಚುಗೆಗೆ ಪಾತ್ರವಾದವು. ಮಂಗಳೂರಿನ ಸುಬ್ರಹ್ಮಣ್ಯ ಸಭಾವು ಪ್ರಕಟಣಾ ವೆಚ್ಚದ ಒಂದು ಭಾಗವನ್ನು ವಹಿಸಿ ಧನ ಸಹಾಯ ಒದಗಿಸಿತು. 'ಸತ್ಯದರ್ಶನ' ಕಿರುಪುಸ್ತಕವನ್ನು ಶ್ರೀಶ್ರೀ ಶೃಂಗೇರಿ ಜಗದ್ಗುರು ಭಾರತೀ ತೀರ್ಥ ಮಹಾಸ್ವಾಮಿಗಳವರು ಮುಂಬೈ ಚೆಂಬೂರಿನ ಶಂಕರಮಠದಲ್ಲಿ ಬಿಡುಗಡೆಗೊಳಿಸಿ ಲೋಕಾರ್ಪಣೆಗೈದರು. ಇವರ ಸಾಹಿತ್ಯ ಸೇವೆಯನ್ನು ಗುರುತಿಸಿ ಮುಂಬೈ ಬ್ರಾಹ್ಮಣ ಸಂಘವು "ಗೋಕುಲ"ದಲ್ಲಿ ಸನ್ಮಾನಿಸಿದೆ. ಇದಲ್ಲದೆ, ಕೋಟಿಕಾರಿನ ಶ್ರೀ ಶಂಕರ ಶೃಂಗೇರಿ ಶಾರದಾ ಪೀಠದಲ್ಲಿ, ಪಾವಂಜೆ ಜ್ಞಾನಶಕ್ತಿ ದೇವಸ್ಥಾನದ ಕಾರ್ಯಕ್ರಮವೊಂದರಲ್ಲಿ ಮತ್ತು ಇನ್ನಿತರ ಸಂಘ ಸಂಸ್ಥೆಗಳಿಂದಲೂ ಸನ್ಮಾನಿಸಲ್ಪಟ್ಟಿದ್ದಾರೆ. 'ಕಠೋಪನಿಷತ್' ಮತ್ತು 'ಈಶಾವಾಸೋಪ' ನಿಷತ್ತುಗಳ ಸರಳ ಕನ್ನಡ ರೂಪಾಂತರಗಳು ಸಮಾಜದ ಒಂದೆರಡು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಇನ್ನೊಂದಷ್ಟು ಕೃತಿಗಳು ಕರಡುರೂಪದಲ್ಲಿ ಸಂಗ್ರಹಗೊಂಡಿವೆ.

ಸಮಾಜಮುಖಿ 'ಅಪಯಶ'ರು ಬೆಂಗಳೂರಿನ ಕೋಡಿಗೆ ಹಳ್ಳಿಯ ನಮ್ಮ ಸಮಾಜಭವನ ಹಾಗೂ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ ನಿರ್ಮಾಣ ಸಮಯದಲ್ಲಿ ಸಮಾಜ ಬಾಂಧವರೊಂದಿಗೆ ತನು–ಮನ–ಧನದೊಂದಿಗೆ ಶ್ರಮಿಸಿದ್ದು ಸರ್ವವಿದಿತ. ಇದಕ್ಕಿಂತ ಮೊದಲೇ ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘಟನೆಯ ಪೂರ್ವಭಾವಿ ಕಲಾಪಗಳಲ್ಲಿ ಸಮಾಜದ ಪ್ರಮುಖರಾದ ದಿ। ಅಂಬಲಪಾಡಿ ಕೃಷ್ಣರಾವ್, ದಿ। ಯೋಗೇಂದ್ರ ರಾವ್, ದಿ। ಆಳುಗ್ಗೇಲ್ ಗಂಗಾಧರ ರಾವ್ ಹಾಗೂ ಶ್ರೀಮಾನ್ ಬೈಲಕೆರೆ ನಾರಾಯಣ ರಾವ್ ಮುಂತಾದವರೊಂದಿಗೆ ನಿಕಟ ಸಂಪರ್ಕವಿದ್ದು ಸಮಾಜದ ಏಳಿಗೆಗೆ ಕೈಜೋಡಿಸಿದ್ದಾರೆ. ವಯೋಸಹಜ ಖಾಯಿಲೆಗಳಿಂದ ಬರವಣಿಗೆ ಕಾರ್ಯ ಕುಂಠಿತಗೊಂಡಿದ್ದರೂ, 'ಬರೆಯುವುದು' ಇವರಿಗೆ ಅನಿವಾರ್ಯ ಧರ್ಮವಾಗಿದೆಯಂತೆ. ಶಾರದಾಂಬೆಯು ಇನ್ನೂ ಹೆಚ್ಚಿನ ಸಾಹಿತ್ಯ ಸೇವೆಯ ಭಾಗ್ಯ ಕರುಣಿಸಲೆಂದು ಆಶಿಸುತ್ತಾ, ಆರೋಗ್ಯವಂತರಾಗಿ ನೂರ್ಕಾಲ ಬಾಳಿಬದುಕಿ ಎಂದು ಹಾರೈಸುವ ನಿಮ್ಮ ಅಭಿಮಾನಿಗಳು ಹಾಗೂ ಸಂಬಂಧಿಕರು.

**ಪರಿಚಯ ಲೇಖಕ : ಜಿ.ಕೆ ಕೊಲ್ವೆ ಉಡುಪಿ**
**(ಅಪಯಶರ ಚಿಕ್ಕಮ್ಮನ ಮಗ)**

## ಮರೆಯಲಾಗದ ನೆನಪುಗಳು

ಕಬ್ಬಿನಾಲೆಯ ಹಾದಿ ಬಲು ಕಗ್ಗಂಟು
ಅಂದು ನಾವು ಹೊರಟ ಮಂದಿ ಎಂಟು
ಬೆಸೆಯಲಿತ್ತು ನಮ್ಮೊಳಗೆ ಹೊಸ ನಂಟು॥

ಕೂಡಿ ಬಂದಿತು ಕುಚ್ಚೂರು ಕುಟುಂಬಸ್ಥರ ಯೋಗ
ಮಾಘ ಬಹುಳ ನವಮಿ ಶುಭಲಗ್ನದಾಗ
ಹಮ್ಮಿಕೊಂಡಿದ್ದರು ಶತ ಚಂಡಿಕಾ ಯಾಗ॥

ಸಿಕ್ಕಳು ನನಗೊಬ್ಬ ಗೆಳತಿ
ಆಕೆಯ ಶುಭನಾಮ ಪ್ರಗತಿ
ಬಲು ಅಪೂರ್ವ ಅವಳ ಸಂಸ್ಕೃತಿ॥

ಗಡಿಬಿಡಿಯ ಹುಡುಗ ಮನೀಷ
ತುಂಟಾಟ ಮಾಡುವುದೆ ಅವನಿಗೆ ಹರುಷ
ಬಿಡಲಿಲ್ಲ ಅತ್ತಿಗೆಗೆ ಕೂರಲು ಒಂದು ನಿಮಿಷ॥

ವೇದ ವಾದ್ಯಗಳ ಘೋಷದ ಗುಂಗಲಿ
ಅರಳುತ್ತಿತ್ತು ಬಗೆ ಬಗೆಯ ರಂಗೋಲಿ
ಬೆಳಗಿನ ಸಿದ್ಧತೆ ಸಾಗುತ್ತಿತ್ತು ಭರದಲಿ॥

ಹುಬ್ಬೇರಿಸುವಂತಿದೆ ಯಾಗ ಮಂಟಪದ ಅಲಂಕಾರ
ಕರ್ಮಠರ ಕೈಯಲ್ಲಿ ಮೂಡಿದ ಚಮತ್ಕಾರ
ಬಣ್ಣಿಸಲು ಹೂಡುತಿವೆ ಪದಗಳು ಅಸಹಕಾರ॥

ಇತ್ತೊಂದು ತೊಂದರೆ ರಾತ್ರಿಯ ಮಾಡಲು ಬೆಳಗು
ಒಂದೇ ಸಮನೆ ಬೀಸುವ ತಂಗಾಳಿ ಹಾಗೂ
ನಡು ನಡುವೆ ಬೊಬ್ಬಿಡುವ ನಾಯಿಯ ಕೂಗು॥

ಬಾಗಿಲಿಲ್ಲದ ಬಚ್ಚಲು ಮನೆಯಲಿ
ಮಾಡಿ ಮುಗಿಸಿದೆ ಸ್ನಾನ ತ್ವರೆಯಲಿ
ಇಡ್ಲಿ ಖಾಲಿಯಾಗುವುದೆಂಬ ಶಂಕೆಯಲಿ॥

ಅಚ್ಚುಕಟ್ಟಾದ ಬೆಳಗಿನ ಉಪಹಾರ
ಕುಡಿದೆವು ಜೀರಿಗೆ ಬೆರೆಸಿದ ನೀರ
ಭರ್ಜರಿಯಾಗಿತ್ತು ಊಟೋಪಚಾರ॥

ಬೆಳಗಿನ ಜಾವವೆ ಆರಂಭವಾಗಿತ್ತು ಪೂಜೆ
ಮಂಟಪದ ಸುತ್ತಲೂ ಸಂಬಂಧಿಕರ ಗೌಜೆ
ಅನ್ನಸಂತರ್ಪಣೆ ಮುಗಿವಾಗ ಆಗಿತ್ತು ಸಂಜೆ॥

ಯುಕ್ತ ಸಂಜೆಯಲೊಂದು ಹಳೆ ಪ್ರಸಂಗ
ಕುಳಿತು ನೋಡಿದೆ ಮಾವನ ಸಂಗ
ನಡೆಸಿಕೊಟ್ಟವರು ಅಂಬಲಪಾಡಿ ಸಂಘ॥

ಪ್ರಯಾಣದಲಿ ಜೊತೆಯಾದವರ ನೆನೆವುದುಚಿತ
ಅತ್ತೆ ಸೊಸೆ ಜೋಡಿ ವೇದಾವತಿ, ಸಂಗೀತಾ
ದೃಶ್ಯಗಳ ಸೆರೆಹಿಡಿದ ಮಾನ್ವಿ, ಮಮತಾ॥

ಚಾಲಕನ ಸ್ಥಾನದಲಿ ಮುನ್ನಡೆಸಿದ ನವೀನ
ಕಳೆದ ಎರಡು ದಿನಗಳ ನೆನಪು ನಿತ್ಯ ನೂತನ
ಹೀಗೊಂದು ಅನುಭವಕೆ ಸಾಕ್ಷಿಯಾದ ನಿಮಗೆ
ಧನ್ಯ ನಾ ॥

**ನಾಗರಾಜ ರಾವ್ ಕೊಡ್ಲಿ. ಮೊ: 9481803699**

## ಸಂಭ್ರಮ

ಹಳೆಯದನ್ನೆಲ್ಲ ಮರೆತು ಕಹಿ ನೆನಪುಗಳ ಬುಡಸಹಿತ
ಕಿತ್ತುಹಾಕಿ ಹೊಸಬದುಕಿಗೆ ಹೊರಡುವ ಸಂಭ್ರಮ ॥

## ಸ್ಪಂದನ

ಇರಲೊಂದು ಸ್ಪಂದನ......
ಮುಗ್ಧಮಗುವಿನ ನಗುವಿಗೆ......
ಇರಲೊಂದು ಸ್ಪಂದನ...........
ಅಸಹಾಯಕರ ಬಾಳಿಗೆ......
ಇರಲೊಂದು ಸ್ಪಂದನ........... ಸಹಾಯ
ಹಸ್ತದ ಅಗತ್ಯವಿರುವ ನೋವುಂಡವರಿಗೆ......
ಇರಲೊಂದು ಸ್ಪಂದನ...........
ಅಪಘಾತಕ್ಕೀಡಾದ ವ್ಯಕ್ತಿಗಳಿಗೆ......
ಇರಲೊಂದು ಸ್ಪಂದನ.........
ಕೌನ್ಸಿಲರ್ ಆಗಿ ಇನ್ನೊಬ್ಬರ ಮನದಾಳದ
ದುಃಖ, ನೋವಿಗೆ......... !!!

## ದುರಂತ

ದಿನೇ ದಿನೇ ಹೆಚ್ಚುತ್ತಿರುವ ರಸ್ತೆ ಅಪಘಾತಗಳು.... !
ವರ್ಷೇ ವರ್ಷೇ ಉಲ್ಬಣಿಸುತ್ತಿರುವ ಮಾರಕ
ಖಾಯಿಲೆಗಳು !!
ಕಾಲ ಕಳೆದಂತೆಲ್ಲ ಸಂಕೀರ್ಣಗೊಳ್ಳುತ್ತಿರುವ....
ಕೌಟುಂಬಿಕ, ಸಾಮಾಜಿಕ ಬದುಕುಗಳು......!!!
ಹಳ್ಳಿಗರನ್ನೂ, ಹೈರಾಣಾಗಿಸುತಾ ಬಲಿಪಶುಗೈಯುತ್ತಿರುವ
ಜಾಗತೀಕರಣ, ಖಾಸಗೀಕರಣಗಳೆಂಬ
ಪೆಡಂಭೂತಗಳು.......!!!
ಹೀಗೆ ..... ದುರಂತದಲ್ಲಿ ಸಾಗುತಿದೆ ಬಾಳು.

**–ಮಲಿಕ್ ಉಳಿಯಾರು**

## ಅನಾವರಣ

ಯೋಚನೆಗಳ ಸುಳಿಯಲ್ಲಿ ಸಿಲುಕಿ
ಸುತ್ತುತ್ತಿರುವ ಮಿದುಳಿನ.... **ಒತ್ತಡ.....!**
ಪರಿಸ್ಥಿತಿಯ ಕೈಗೊಂಬೆಗಳಾಗಿ ಬೇಕಾದ, ಬೇಡವಾದ
ಸಂಬಂಧಗಳಲ್ಲಿ ಸಿಲುಕಿಕೊಳ್ಳುವುದು, ಜೀವನದ
ಅನಿವಾರ್ಯತೆಗಳಲ್ಲಿ ಒಂದೆಂಬ.........
ಕಟುಸತ್ಯದ..................... **ಅನಾವರಣ !!**

ಆ ಸಂಬಂಧಗಳು ಸೃಷ್ಟಿಸುವ ಜಟಿಲತೆಗಳಲ್ಲಿ
ಗೋಜಲಾಗುವ ಜೀವನ ವಯಸ್ಸಾದಂತೆಲ್ಲ
ಭಾರವೆನಿಸತೊಡುವ........... **ಭಾವನೆ !!!**

ಎಲ್ಲ ಲೌಕಿಕ ಬಂಧನಗಳನ್ನು ಸಂಬಂಧಗಳನ್ನು
ಕಳಚಿಕೊಂಡು ಕಾಣದ ಲೋಕಕ್ಕೆ..................
ಹೊರಡಲೇಬೇಕಾದ........... **ಸಂಕಲ್ಪ....!!!!**
**ಅಂತಿಮವಾಗಿ ಇದಿಷ್ಟೇ ಜೀವನ........**

## ವಿಳಾಸ ಬದಲಾವಣೆ

ಶಿವಮೊಗ್ಗ ಸಹ್ಯಾದ್ರಿ ನಗರದಲ್ಲಿದ್ದ ಶ್ರೀಶಂಕರನಾರಾಯಣ ಹೆಬ್ಬಾರ್‌ರವರು ಈ ಕೆಳಗಿನ ವಿಳಾಸಕ್ಕೆ ತಮ್ಮ ನಿವಾಸವನ್ನು ಬದಲಾಯಿಸಿದ್ದಾರೆ.

**SHANKARANARAYANA HEBBAR**
Flat No 404, SLV Torrent
Apartments
3rd Cross, Mallappa Layout
Babusapalya, Kalyana Nagar Post
Bangalore 560043


## ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (O), Mobile : 9845149521



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

# ಓದುವ ಹವ್ಯಾಸ–ಬುದ್ಧಿಯ ವಿಕಾಸ–ಮನಸ್ಸಿಗೆ ಉಲ್ಲಾಸ

– ಎಸ್. ಪದ್ಮನಾಭ ರಾವ್
ನಿವೃತ್ತ ಮುಖ್ಯ ಗ್ರಂಥಾಲಯ ಅಧಿಕಾರಿ

ಓದುವುದು ಎಂದರೆ ಅದು ಒಂದು ಕಲೆ. ಎಲ್ಲರಿಗೂ ಅದು ಸಿದ್ಧಿಸುವುದಿಲ್ಲ. ಓದು ಮನುಷ್ಯನನ್ನು ಸಂಪೂರ್ಣ ಮನುಷ್ಯನನ್ನಾಗಿ ಮಾಡುತ್ತದೆ–ಹೀಗೆಂದವರು ಫ್ರೇನ್ಸಿಸ್ ಬೇಕನ್. ಆಧುನಿಕ ಯುಗದಲ್ಲಿ ಓದು ಅತ್ಯಾವಶ್ಯಕವಾದ ವಿಷಯವಾಗಿದ್ದು ಅದು ವಿಶ್ರಾಂತಿ ವೇಳೆಯನ್ನು ಸದುಪಯೋಗಗೊಳಿಸುವುದು. ಅಲ್ಲದೆ ಬಹುಪಯೋಗಿಯಾಗಿ ಯುವ ಮತ್ತು ವಯಸ್ಕ ಜನಾಂಗಕ್ಕೆ ಓದು ಮನಸ್ಸಿಗೆ ಸಮಾಧಾನ, ಸಂತೋಷವನ್ನು ತರುವುದಲ್ಲದೆ ಜ್ಞಾನದ ವಿಕಾಸಕ್ಕೂ ಬುದ್ಧಿಯ ಪ್ರಬುದ್ಧತೆಗೂ ಅವರ ವಿದ್ಯಾಭ್ಯಾಸದಲ್ಲಿ ನೆರವಾಗುವುದು.

ಓದುವುದರಿಂದ ಬೇಕಾದಷ್ಟು ಪ್ರಯೋಜನವನ್ನು ಪಡೆಯಬಹುದು. ಅದನ್ನು ಬೇರೆ ಯಾವ ಮಾಧ್ಯಮದಿಂದಲೂ ಒದಗಿಸಲು ಕಷ್ಟ ಸಾಧ್ಯ. ಅಂದರೆ ಅದರ ಪ್ರಭಾವ ಅಷ್ಟು ಪ್ರಮುಖವಾದುದು. ಓದುವುದು ಅಂದರೆ ಬರೇ ನೆಪ ಮಾತ್ರಕ್ಕೆ ಓದುವುದು–ಓದುವ ಕಲೆ ಅಲ್ಲ. ಅದರ ಬದಲು ಓದಿಗೆ ಅದರದೇ ಆದ ಸೊಗಸು ಇದೆ ಮತ್ತು ಅದು ಪ್ರತಿಫಲವನ್ನು ನೀಡುತ್ತದೆ. ಅದು ಹೇಗೆಂದರೆ ಓದಿನಿಂದ ಸಂತೋಷ, ನೆಮ್ಮದಿ ಹಾಗೂ ಮಾನಸಿಕ ಸಂತೃಪ್ತಿಯನ್ನು ಓದುಗರು ಪಡೆಯುತ್ತಾರೆ. ಅಲ್ಲದೆ ಓದುಗನು ಓದುವುದರಿಂದ ತನ್ನ ಮನಸ್ಸಿನಲ್ಲಿರುವ ಒಳ್ಳೆಯ ಭಾವನೆಯನ್ನು ರಚನಾತ್ಮಕ ವಿಚಾರದಲ್ಲಿ ವಿಷದಪಡಿಸಬಹುದು.

ಓದುವುದು ಒಂದು ಬಹುಮುಖ್ಯ ಮಾಧ್ಯಮ ಎಂದು ಹೇಳಬಹುದು. ಇದರಿಂದ ಓದುಗನನ್ನು ಜಗತ್ತಿನ ವಿಷಯಗಳಿಗೆ ಪರಿಚಯಿಸಲು ಹಾಗೂ ಹೊಸ ಹೊಸ ವಿಷಯಗಳ ಶೋಧನೆಗೆ, ಉನ್ನತ ವ್ಯಕ್ತಿಗಳ ವಿಚಾರಗಳನ್ನು ತಿಳಿಯಲು ಹಾಗೂ ಜಗತ್ತಿನ ಪ್ರಮುಖ ಘಟನೆಗಳನ್ನು ತಿಳಿಯಲು ಅನುಕೂಲ ಮಾಡುವುದು. ಪ್ರತಿಯೊಬ್ಬ ಮಾನವನಿಗೂ ತನ್ನ ಬೇಸರ ಸಮಯವನ್ನು ಕಳೆಯಲು ಹಾಗೂ ವಿರಾಮ ವೇಳೆಯನ್ನು ಸದ್ವಿನಿಯೋಗಗೊಳಿಸಲು ಓದುವ ಅಭ್ಯಾಸ ಅಥವಾ ಅಭಿರುಚಿ ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿಯನ್ನು ತಂದುಕೊಡುವುದು.

ಸಾಕ್ಷರತೆ ಅಂದರೆ ಮುಂದಕ್ಕೆ ಓದಲು ಅಥವಾ ಅಭ್ಯಾಸ ಮಾಡಲು ಅದು ತೆರೆದಿಟ್ಟ ಅಥವಾ ಕೈ ಬೀಸಿ ಕರೆಯುವ ಆಮಂತ್ರಣವಿದ್ದಂತೆ. ಅಂದರೆ, ಪ್ರಾಥಮಿಕ ವಿದ್ಯಾಭ್ಯಾಸವಿದ್ದಲ್ಲಿ ನಿಮ್ಮ ಓದುವ ಹವ್ಯಾಸವನ್ನು ಮನಸ್ಸಿನಲ್ಲಿ ಬೆಳೆಸಬಹುದು. ಒಬ್ಬನು ಏನು ಓದುವನು ಎಂಬುದು ಅವನಿಗೆ ಯಾವುದರ ಅವಶ್ಯಕತೆ ಹಾಗೂ ಯಾವುದರ ಬಗ್ಗೆ ಅಪೇಕ್ಷೆ ಇದೆ ಎಂಬುದರ ಮೇಲೆ ಅವಲಂಬಿಸಿದೆ. ಪ್ರಾರಂಭದಲ್ಲಿ ಅವಶ್ಯಕತೆಯ ಓದಿಗೂ ಮತ್ತು ಅಭಿರುಚಿಯ ಓದಿಗೂ ಇರುವ ವ್ಯತ್ಯಾಸವನ್ನು ನಾವು ಅವಶ್ಯವಾಗಿ ತಿಳಿಯಬೇಕು. ಎರಡು ವಾಕ್ಯಾಂಶಗಳು ಒಂದೇ ಅರ್ಥ ಬರುವಂತೆ ಹೆಚ್ಚಿನ ಸಾಹಿತಿಗಳು ಈ ವಿಷಯದ ಬಗ್ಗೆ ಬರೆದಿರುವರು. ಒಬ್ಬನಿಗೆ ಜೀವನದಲ್ಲಿ ಯಾವ ಆಸಕ್ತಿ ಇರುತ್ತದೋ ಅದರಂತೆ ಓದುವುದರಲ್ಲೂ ಆಸಕ್ತಿಯೂ ವಿಶಾಲ ಹಾಗೂ ವೈವಿಧ್ಯಮಯದಿಂದ ಕೂಡಿರುತ್ತದೆ. ಅವುಗಳು ಸಮಾಜದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಸಕ್ತಿಯನ್ನು ನಿರ್ಣಯಿಸುತವೆ.

**ಓದುವುದರಲ್ಲಿ ವರ್ಗೀಕರಣ**

ಲೇಡೀರ್‌ರವರು ಹೇಳುವಂತೆ ಓದು ಯಾವಾಗಲೂ ಸ್ಪಷ್ಟವಾದ ಬೆಲೆಯುಳ್ಳ ತೀರ್ಪನ್ನು ಎಲ್ಲಾ ಪ್ರಮುಖ ಸಮಕಾಲೀನ ನಾಗರೀಕತೆಯಲ್ಲೂ ಕೊಟ್ಟಿದೆ. ಆದುದರಿಂದ ಗ್ರಂಥಾಲಯವು ಓದುಗರ ಓದಿನ ಆಸಕ್ತಿ ಮೇಲೆ ಬೆಳೆಯುವುದು. ಗ್ರಂಥಾಲಯವನ್ನು ಉಪಯೋಗಿಸಲು ಓದುಗರ ಸಂಖ್ಯೆ ಜಾಸ್ತಿಯಾದಂತೆ ಗ್ರಂಥಾಲಯದ ಗುಣಮಟ್ಟ ಹಾಗೂ ಕೀರ್ತಿ ಗೌರವ ಹೆಚ್ಚುವುದು. ಲೇಡೀರರವರು ಓದುವ ಆಸಕ್ತಿಯನ್ನು ಈ ನಾಲ್ಕು ರೀತಿಯಲ್ಲಿ ವರ್ಗೀಕರಿಸಿದ್ದಾರೆ: 1. ನಿಷ್ಠೆಯಿಂದ ಕೂಡಿದ ಓದುವಿಕೆ. 2. ಸಂಸ್ಕೃತಿಯಿಂದ ಕೂಡಿದ ಓದುವಿಕೆ. 3. ಸಾಧನೆಯಿಂದ ಕೂಡಿದ ಓದು ಮತ್ತು 4. ವಿರಾಮ ಕಾಲದ ಓದು. ಜನರ ಇತರ ಚಟುವಟಿಕೆಗಳಂತೆ ಓದುವುದು ಸಾಕಷ್ಟು ತ್ವರಿತಗತಿಯಲ್ಲಿ ಪ್ರಭಾವವನ್ನು ಸಾಮಾಜಿಕ ಬದಲಾವಣೆಯಲ್ಲಿ ತಂದಿದೆ. ಆಧುನಿಕ ಸಾರ್ವಜನಿಕ ಕ್ಷೇಮವನ್ನು ನೋಡುವ ಸರಕಾರದ ದೃಢ ನಂಬಿಕೆ ಎಂದರೆ ಆರ್ಥಿಕ ಅಭಿವೃದ್ಧಿಯು ಜ್ಞಾನದ ಬೆಳವಣಿಗೆಯಿಂದ ಕೂಡಿದ್ದು ಅದರಲ್ಲಿ ‘ಓದುವಿಕೆ’ ಪ್ರಮುಖ ಪಾತ್ರವಹಿಸುತ್ತದೆ. ಅಲ್ಲದೆ ಬಹಳ ಪ್ರಮುಖವಾದ ಮಾಧ್ಯಮವಾಗಿ ಓದುವಿಕೆಯ ಜ್ಞಾನವನ್ನು ಸಂಪಾದಿಸುವ ಸಾಧನವೆಂದೂ ಹೇಳಬಹುದು.

ಓದುವುದು ಸಾಮಾನ್ಯವಾಗಿ ಒಂದು ಅಭ್ಯಾಸವಾಗಿದ್ದು ಶೈಕ್ಷಣಿಕ ಸಂಸ್ಥೆಗಳಾದ ಶಾಲಾ ಕಾಲೇಜು, ವಿಶ್ವ ವಿದ್ಯಾನಿಲಯಗಳಲ್ಲಿ ಹಾಗೂ ಗ್ರಂಥಾಲಯಗಳಲ್ಲಿ ಇದನ್ನು ಸಾಕಷ್ಟು ಪ್ರಮಾಣದಲ್ಲಿ ಬೆಳೆಸಬಹುದು. ಓದುವ ಅಭ್ಯಾಸ ಮತ್ತು ವಿದ್ಯಾರ್ಜನೆಗಳಿಗಿರುವ ಪರಸ್ಪರ ಸಂಬಂಧವನ್ನು ಸರಿಯಾಗಿ ತಿಳಿದುಕೊಂಡು ಈ ಓದುವ ಅಭ್ಯಾಸವನ್ನು ಶಾಲೆ ಮತ್ತು ಗ್ರಂಥಾಲಯಗಳಲ್ಲಿ ಬೆಳೆಸಬೇಕು. ನಾವು ಸಾಮಾನ್ಯವಾಗಿ ನೋಡಬಹುದು ಏನೆಂದರೆ ಜನರು ಆಧ್ಯಾತ್ಮಿಕ ಮತ್ತು ಭಾವನಾತ್ಮಕ ವಿಷಯಗಳ ಬಗ್ಗೆ ಉತ್ತೇಜನವನ್ನು ಓದುವುದರಿಂದ ಪಡೆಯುತ್ತಾರೆ. ಯಾವ ಒಂದು ದೃಷ್ಟಿಕೋನದಲ್ಲಿ ನೋಡಿದರೂ ಜನರು ಓದುವುದರಿಂದ ತಮ್ಮ ಮನಸ್ಸಿಗೆ ಶಾಂತಿ, ನೆಮ್ಮದಿ ಮತ್ತು ಸಂತೋಷ ಹಾಗೂ ಲಾಭವನ್ನು ಪಡೆಯುವರು. ಅದು ಅವರು ಓದುವ ಗ್ರಂಥಗಳ ಮೇಲೆ ಹಾಗೂ ಅವರ ವೈಯಕ್ತಿಕ ಜ್ಞಾನದ ಶಕ್ತಿಯನ್ನು ಅವಲಂಬಿಸಿದೆ. ಇದಕ್ಕಾಗಿ ಎಲ್ಲರಿಗೂ ಓದಲು ಪುಸ್ತಕಗಳು ಸುಲಭದಲ್ಲಿ ದೊರಕುವಂತೆ ಆದಾಗ ಓದುವಿಕೆ ಎಲ್ಲರಲ್ಲೂ ಮೂಟಿಯುವುದು. ಓದುವುದು ಎಂದರೆ ಅದು ಒಂದು ತರದ ಚಟುವಟಿಕೆಯಾಗಿದ್ದು ಅದನ್ನು ಒಳ್ಳೆಯ ರೀತಿಯಲ್ಲಿ ಸಮಯದ ಸದುಪಯೋಗ ಗೊಳಿಸಬಹುದು. ಅಲ್ಲದೇ ಮನಸ್ಸಿನ ನೆಮ್ಮದಿ ಮತ್ತು ಸಂತೋಷಕ್ಕಾಗಿ ಕೂಡಾ ಬೆಳೆಸಬಹುದು.

**ಜ್ಞಾನ ಸಂಪಾದನೆಯ ಕೀಲಿ**

ಲೀಲೆ ಹೇಡ್ಲಿಯವರ ಪ್ರಕಾರ ಓದುವುದು ಒಂದು ಒಳ್ಳೆಯ ಗುರುತು ಮಾಡಿದ ಮಾರ್ಗವಾಗಿದ್ದು ಅದು ನಮ್ಮನ್ನು ಸಂತೋಷ ಮತ್ತು ಸಮಾಧಾನದ ಲೋಕಕ್ಕೆ ಕರೆದೊಯ್ಯುವುದು. ಒಬ್ಬ ಓದುಗನಿಗೆ ಒಳ್ಳೆಯ ಓದುವ ಅಭಿರುಚಿಯು ಅವನಿಗಿರುವ ನಿರ್ದಿಷ್ಟ ವಿಚಾರವನ್ನು ಪ್ರತಿಪಾದಿಸುತ್ತವೆ. ಅಲ್ಲದೆ ಒಳ್ಳೆಯ ಓದುವಿಕೆಯು ಆಳವಾಗಿ ಚಿಂತಿಸುವ ವಿಭಾಗವಾಗಿದ್ದು ಇವರಿಂದ ಓದುಗನು ಓದಿದ ಪ್ರತಿಯೊಂದು ಪದದ ಆಳವಾದ ಅರ್ಥವನ್ನು ಆಸ್ವಾದಿಸುತ್ತಾನೆ. ಇನ್ನು ಕೆಲವರಿಗೆ ಒಳ್ಳೆಯ ಓದುವಿಕೆಯು ಒಂದು ವಿಷಯಕ್ಕೆ ಸಂಬಂಧಪಟ್ಟ ಸಾಹಿತ್ಯ ಬಹಳಷ್ಟು ಪ್ರಮಾಣದಲ್ಲಿ ಪ್ರಕಟವಾಗಿದ್ದು ಅದರಲ್ಲಿ ಬೇಕಾಗುವ ಅಂಶಗಳನ್ನು ಮಾತ್ರ ಓದುವ ಚಾಕಚಾಕ್ಯತೆಗೆ ಒಳ್ಳೆಯ ಓದುವಿಕೆ ಬಹಳ ಪರಿಣಾಮಕಾರಿಯಾಗುವುದು. ಓದುವುದು ಮೂಲಭೂತ ಸಂಪರ್ಕ ಸಾಧನವಾಗಿದ್ದು ಅದಕ್ಕೆ ಒಳ್ಳೆಯ ಮತ್ತು ಬೆಲೆಬಾಳುವ ಪುಸ್ತಕಗಳು ಹಲವಾರು ಉದ್ದೇಶಗಳಿಗೆ ಅನುಕೂಲವಾಗಿವೆ. ಒಳ್ಳೆಯ ಓದುವಿಕೆಯನ್ನು ಲಘು ವಿಚಾರವಾಗಿ ಪರಿಗಣಿಸಿದರೆ ಅದು ಅವರ ಒಳ್ಳೆಯತನವನ್ನು ಕಡಿಮೆ ಗೊಳಿಸುವುದು. ಇದಕ್ಕೆ ವಿಶಾಲಭಾವನೆ ಮತ್ತು ಬೋಧನೆಯ ಹಾಗೂ ಇತರ ಸಾಧನೆಗಳ ಉಪಯೋಗ ಅವಶ್ಯವಾಗಿದೆ. ಆದುದರಿಂದ ಓದು ಒಂದು ಜ್ಞಾನವನ್ನು ಸಂಪಾದಿಸುವ ಕೀಲಿಯಾಗಿದ್ದು ಅದು ಪ್ರಪಂಚದಲ್ಲಿರುವ ಅಸಂಖ್ಯಾತ ಜ್ಞಾನದ ನಿಧಿಯ ಸಾಲುಗಳನ್ನು ಗ್ರಂಥಾಲಯಗಳಲ್ಲಿ ಪ್ರದರ್ಶಿಸುತ್ತದೆ.

ಓದುವ ಆಸಕ್ತಿಯನ್ನು ಶಾಶ್ವತವಾಗಿ ಬೆಳೆಸುವುದಲ್ಲದೆ ಅದರಲ್ಲಿ ಆಯ್ಕೆ ಮಾಡಿ ಬೇಕಾಗುವ ವಿಷಯಗಳ ಬಗ್ಗೆ ಮಾತ್ರ ಓದುವ ಅಭ್ಯಾಸವನ್ನೂ ಬೆಳೆಸಿಕೊಳ್ಳಬೇಕು. ಯಾವುದಾದರು ಏನಾದರೂ ಓದುವ ಆಸಕ್ತಿಯು ಅನಾವಶ್ಯಕವಾಗಿ ಬೆಳೆಯಬಾರದು. ಓದಲು ಪುಸ್ತಕವನ್ನು ಆರಿಸುವಾಗ ಸರಿಯಾದ ರೀತಿಯಲ್ಲಿ ತಾರತಮ್ಯವನ್ನು ತಿಳಿದು ಯಾವುದು ಒಳ್ಳೆಯದಿಲ್ಲವೋ ಅದನ್ನು ಓದಬಾರದು. ಬೆಳವಣಿಗೆಯಿಂದ ಕೂಡಿದ ಓದುವ ಆಸಕ್ತಿ ಮತ್ತು ಅಭ್ಯಾಸ ಜೊತೆ ಜೊತೆಯಾಗಿ ಹೋಗಬೇಕು. ಪುಸ್ತಕ ಮತ್ತು ಓದು ಇವೆರಡು ಬೇರ್ಪಡಿಸಲಾಗದ ವಿಷಯವಾಗಿದ್ದು ಒಂದು ಇಲ್ಲದೆ ಇನ್ನೊಂದು ತನ್ನಷ್ಟಕ್ಕೆ ಬೆಳೆದು ಸಮೃದ್ಧಿಯಾಗಲು ಸಾಧ್ಯವಿಲ್ಲ.

ನಿಜವಾದ ಸುಶಿಕ್ಷಿತನು ನಿಸ್ಸಂಶಯವಾಗಿ ಓದುವುದರಿಂದ ಸಂತೋಷ ಸಮಾಧಾನವನ್ನು ಪಡೆಯುವನು. ಓದುವುದರಿಂದ ಮೂರು ರೀತಿಯ ಸತ್ಪರಿಣಾಮ ಉಂಟಾಗುವುದು. ಅವನ ಜ್ಞಾನವನ್ನು ವೃದ್ಧಿಗೊಳಿಸುವುದು. ಗುಣ ಗ್ರಾಹಕತೆ ಮತ್ತು ಬೆಲೆ ಹೆಚ್ಚುವುದು ಮತ್ತು ಅವನ ಭಾವನಾ ಜೀವನದ ಮೌಲ್ಯವೂ ಒಳ್ಳೆಯ ಓದಿನಿಂದ ಹೆಚ್ಚುವುದು. ಓದಿನಿಂದ ಯಾರು ಸಂತೋಷ ಪಡುವುದಿಲ್ಲವೋ ಅವರ ಬೌದ್ಧಿಕ ಮತ್ತು ಮಾನಸಿಕ ಜೀವನವು ಬೆಳೆಸಲು ಕಷ್ಟವಾಗುವುದು. ಓದುವಿಕೆ ಯಾವಾಗಲೂ ಉಪಯುಕ್ತತೆಯ ಉಪಯೋಗವನ್ನು ಕೂಡಿಕೊಂಡಿರುವುದಿಲ್ಲ. ಜಾಣನಲ್ಲದವನಿಗೆ ಓದುವುದು ಸಂತೋಷವನ್ನುಂಟು ಮಾಡಿದರೆ, ಜಾಣನಾದವನಿಗೂ ಕುತೂಹಲ ಮತ್ತು ಉತ್ತೇಜನವನ್ನು ನೀಡುವುದು.

ಬೆಳೆಯುತ್ತಿರುವ ಭಾರತ ದೇಶದಲ್ಲಿ ಅನಕ್ಷರತೆ ಜಾಸ್ತಿಯಿದ್ದು. ಅದರಲ್ಲೂ ವಿಷಾದದ ಸಂಗತಿಯೆಂದರೆ ಓದಬೇಕೆಂಬ ಲವಲವಿಕೆ ಇಲ್ಲದಿರುವುದು. ಅಲ್ಲದೆ ಗ್ರಂಥಗಳ ಬೆಲೆಯು ದಿನದಿಂದ ದಿನಕ್ಕೆ ಏರುತ್ತಿರುವುದು ಮಾತ್ರವಲ್ಲದೆ ಗ್ರಂಥಾಲಯಗಳು ಇನ್ನೂ ಸರಿಯಾದ ರೀತಿಯಲ್ಲಿ ಎಲ್ಲೆಡೆಗಳಲ್ಲೂ ವ್ಯವಸ್ಥಿತವಾಗಿ ಇರದ ಕಾರಣ ಜನರಲ್ಲಿ ಓದುವ ಆಸಕ್ತಿ, ಅಭ್ಯಾಸವನ್ನು ಬೆಳೆಸಲು, ಜನಪ್ರಿಯಗೊಳಿಸಲು ಕಷ್ಟ ಸಾಧ್ಯವಾಗಿದೆ. ಓದುವ ಅಭ್ಯಾಸದ ಕೊರತೆಗೆ ಮುಖ್ಯ ಕಾರಣವೇನೆಂದರೆ ನಮ್ಮ ಇಂದಿನ ಅತೀ ತಪ್ಪಿನ ಶಿಕ್ಷಣ ಪದ್ಧತಿ. ಓದುವ ಅಭ್ಯಾಸವು ಅವಶ್ಯಕವಾಗಿ ಪ್ರಾಥಮಿಕ ಶಾಲೆಯ ಮಟ್ಟದಿಂದಲೇ ಬೆಳೆಸಬೇಕು. ಆದರೆ ಓದುವ ಹವ್ಯಾಸದ ಕೊರತೆಯನ್ನು ಗಮನಿಸಿದರೆ ಅದು ಈಗಿನ ಮಕ್ಕಳು ಪುಸ್ತಕ ವ್ಯವಸ್ಥೆಯಾದ ಪಠ್ಯ ಪುಸ್ತಕವನ್ನು ಕ್ರೇಂದ್ರೀಕರಿಸಿದ ವಿದ್ಯಾಭ್ಯಾಸ ಕಾರಣ. ಇದರಿಂದ ಉಪಾಧ್ಯಾಯರುಗಳಿಗೆ ಮತ್ತು ತಂದೆ ತಾಯಿಗಳಿಗೆ ಇತರ ಪುಸ್ತಕವನ್ನು ಓದುವ ಅಭ್ಯಾಸಕ್ಕೆ ತಮ್ಮ ಮಕ್ಕಳಿಗೆ ಹೇಳಲು ತೊಂದರೆಯಾಗಿ ಅವರ ಪಠ್ಯ ಪುಸ್ತಕಗಳ ಮಟ್ಟಿಗೆ ಮಾತ್ರ ಸೀಮಿತ ಓದು ಆಗುವುದು. ಮಕ್ಕಳಲ್ಲಿ ಓದುವ ಅಭ್ಯಾಸವನ್ನು ಮೂಡಿಸಲು ಅವರ ಪಾಲಕರು ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಅವರು ತಳೆಯುವ ಭಾವನೆಯ ಮೇಲೆ ಹೊಂದಿದೆ. ವಿದ್ಯಾರ್ಥಿಗಳ ಓದುವ ಅಭ್ಯಾಸವನ್ನು ಶಾಲೆಯಲ್ಲಿ ಕೇವಲ ಶಿಫಾರಸ್ಸು ಮಾಡಿದ ಪುಸ್ತಕಗಳನ್ನು ಮಾತ್ರ ಕೇಂದ್ರೀಕರಿಸಿರುವುದರಿಂದ ಪರೀಕ್ಷೆಯ ಪ್ರಾಬಲ್ಯವು ಹೆಚ್ಚಿನ ಇತರ ಸಂಬಂಧಪಟ್ಟ ಪುಸ್ತಕಗಳನ್ನು ಓದುವುದರಿಂದ ಮಿತಿಗೊಳಿಸಲ್ಪಟ್ಟಿವೆ. ಇದು ನಿಜವಾದ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವುದಿಲ್ಲ. ವಿದ್ಯಾರ್ಥಿಗಳ ಕುತೂಹಲ ಕುಂಠಿತ ಗೊಳ್ಳುವುದಲ್ಲದೆ ಅವರ ಜ್ಞಾನದ ಬೆಳವಣಿಗೆಗೆ ತಡೆಯಾಗುವುದು. ಅವರ ಜ್ಞಾನದ ಬೆಳವಣಿಗೆಯಾಗಲು ಅವಶ್ಯಕವಾಗಿ ಸಹಾಯವಾಗುವುದು ಯಾವುವೆಂದರೆ ಅವರು ವಿವರವಾಗಿ ಹಾಗೂ ನಿರಂತರವಾಗಿ ಪುಸ್ತಕಗಳನ್ನು ಓದಬೇಕು. ನಮ್ಮ ದೇಶದ ಶೈಕ್ಷಣಿಕ ವ್ಯವಸ್ಥೆಯಲ್ಲಿ ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದಲ್ಲಿ ಪ್ರವೀಣತೆಯನ್ನು ಪಡೆಯುವರು. ಆದುದರಿಂದ ಓದಿದವರಾದ ನಮ್ಮ ಉದ್ದೇಶ ಏನಿರಬೇಕೆಂದರೆ ವಿದ್ಯಾರ್ಥಿಗಳು ಮೊದಲು ಓದುವ ಅಭ್ಯಾಸವನ್ನು ಮಾಡುವ ಬಗ್ಗೆ ನಾವು ಆದ್ಯ ಗಮನ ಹರಿಸಬೇಕು.

ಆದುದರಿಂದ ವಿದ್ಯಾಭ್ಯಾಸದ ಪ್ರಮುಖ ಉದ್ದೇಶವೇನೆಂದರೆ ಅದು ಓದುವ ಅಭ್ಯಾಸವನ್ನು ಮನಸ್ಸಿಗೆ ಹತ್ತುವಂತೆ ಮಾಡಬೇಕು. ಒಳ್ಳೆಯ ಮತ್ತು ಹೆಚ್ಚಿನ ರೀತಿಯಲ್ಲಿ ಗ್ರಂಥ ಯಾ ಇತರ ಓದುವ ಸಾಧನಗಳನ್ನು ಓದಿದಲ್ಲಿ ಅವನ ಜ್ಞಾನದ ದಿಗಂತವು ಬೆರೆಯುವುದಲ್ಲದೆ ಆಲೋಚನಾ ಶಕ್ತಿಯೂ ವೃದ್ಧಿಯಾಗುವುದು. ಓದುವ ಅಭ್ಯಾಸವನ್ನು ಜೀವಂತವಾಗಿಡಲು ಪುಸ್ತಕಗಳನ್ನು ಓದುಗರಿಗೆ ಸುಲಭ ರೀತಿಯಲ್ಲಿ ಸಿಗುವಂತೆ ಕ್ರಮವನ್ನು ಕೈಗೊಳ್ಳಬೇಕು. ಗ್ರಂಥಗಳು ಚಿಂತನ ಮಾಡಿದ ವಾಹನಗಳಾಗಿದ್ದು ಇದರಲ್ಲಿ ಹಿಂದಿನ ಮತ್ತು ಈಗಿನ ವಿಚಾರವಂತರ ಜ್ಞಾನವನ್ನು ಬರೆದಿಡಲಾಗಿದೆ. ಆದುದರಿಂದ ಗ್ರಂಥಾಲಯಗಳು ಓದುವ ಆಸಕ್ತಿಯನ್ನು ಬೆಳೆಸಲು ಸಮರ್ಪಕವಾದ ಪಾತ್ರವನ್ನು ವಹಿಸಿ ಅನುಕೂಲ ಮಾಡಿಕೊಡುವುದು.

*With Best Complimemts From*

**SRI M. SHAILESH RAO**
B.E., Civil
Ph : 9448624324

**Civil Engineer & Contractor**

**SRI MALAVIKA ASSOCIATES**

KALSANKA-UDUPI ROAD, UDUPI.

**Website : shreemaalavikaassociates.com**

# ಧಾರ್ಮಿಕ ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಶೃಂಗೇರಿ ಶ್ರೀ ಶಾರದಾಪೀಠದ ಕೊಡುಗೆ

**– ಡಾ|ಎಚ್.ವಿ.ನರಸಿಂಹಮೂರ್ತಿ, ಕುಂದಾಪುರ**

ಸುಮಾರು ಹನ್ನೆರಡು ಶತಮಾನಗಳ ಹಿಂದೆ ಅವತರಿಸಿದ ಆದಿಶಂಕರ ಭಗವತ್ಪಾದರು ಪವಿತ್ರ ಭಾರತದ ಉದ್ದಗಲಗಳಲ್ಲಿ ಸಂಚರಿಸಿ, ಸನಾತನವೈದಿಕಧರ್ಮ ಮತ್ತು ಅದ್ವೈತ ಸಿದ್ಧಾಂತಗಳನ್ನು ಪುನರುಜ್ಜೀವನಗೊಳಿಸಿದರು. ದೂರದರ್ಶಿಗಳಾದ ಅವರು ಶೃಂಗೇರಿ, ದ್ವಾರಕಾ, ಬದರಿ ಮತ್ತು ಪುರಿಕ್ಷೇತ್ರಗಳಲ್ಲಿ ನಾಲ್ಕು ಅಮ್ನಾಯಪೀಠಗಳನ್ನು ಸ್ಥಾಪಿಸಿ, ಮುಂದಿನ ಜನಾಂಗದ ಉದ್ಧಾರಕ್ಕಾಗಿ ಸನಾತನ ಧರ್ಮದ ಸಂರಕ್ಷಣೆ ಮಾಡಿದರು. ಶಂಕರಭಗವತ್ಪಾದರು ಅಂದು ನಡೆಸಿದ ನಿರಂತರಪ್ರಯತ್ನಗಳಿಂದಾಗಿ ಇಂದು ವೇದ–ಶಾಸ್ತ್ರಗಳು ಉಳಿದಿವೆ. ನಮ್ಮ ದುಃಖ–ದುಮ್ಮಾನಗಳ ನಿವಾರಣೆಗೆ ದೇಶಾದ್ಯಂತ ಶ್ರದ್ಧಾ ಕೇಂದ್ರಗಳಾದ ದೇವಸ್ಥಾನಗಳು ತಲೆಎತ್ತಿ ನಿಂತಿವೆ.

'ಸ್ವಸ್ವರಾಷ್ಟ್ರಪ್ರತಿಷ್ಠಿತ್ಯೈ ಸಂಚಾರಃ ಸುವಿಧೀಯತಾಮ್' ಎಂಬ ಆಚಾರ್ಯರ ಅನುಶಾಸನದಂತೆ ಅವರು ಸ್ಥಾಪಿಸಿದ ದಕ್ಷಿಣಾಮ್ನಾಯಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರುಗಳೆಲ್ಲರೂ ತಮ್ಮ ಪೀಠಾಧಿಪತ್ಯದ ಅವಧಿಯಲ್ಲಿ ವಿಜಯ ಯಾತ್ರೆಗಳನ್ನು ಕೈಗೊಂಡು ಜನಸಾಮಾನ್ಯರಿಗೆ ಅವರಿದ್ದಲ್ಲಿಗೇ ಹೋಗಿ ಸನಾತನ ಧರ್ಮದ ಬೋಧನೆ ಮಾಡುತ್ತಿದ್ದಾರೆ. ತನ್ಮೂಲಕ ಸಮಾಜದಲ್ಲಿ ಶಾಂತಿ–ಸುಭಿಕ್ಷೆಗಳು ನೆಲೆ ನಿಲ್ಲುವಂತೆ ಮಾಡುತ್ತಿದ್ದಾರೆ.

ಶೃಂಗೇರಿಯ ಪೀಠಾಧಿಪತಿಗಳು ತಮ್ಮನ್ನು ಅರಸಿ ಬರುವ ಆಧ್ಯಾತ್ಮಿಕ ಜಿಜ್ಞಾಸುಗಳಿಗೆ ಸೂಕ್ತಮಾರ್ಗದರ್ಶನ ನೀಡಿ, ಸಮಾಜದ ಅಭ್ಯುದಯ ಮತ್ತು ನಿಶ್ರೇಯಸಗಳಿಗೆ ಕಾರಣೀಭೂತರಾಗಿದ್ದಾರೆ. ಈ ಪೀಠದ ಹನ್ನೆರಡನೆಯ ಅಧಿಪತಿಗಳಾದ ಜಗದ್ಗುರು ಶ್ರೀ ವಿದ್ಯಾರಣ್ಯರ ತಾತ್ವಿಕ ಚಿಂತನೆ ಮತ್ತು ರಾಜಕೀಯ ನೈಪುಣ್ಯದ ಫಲವಾಗಿ ಹದಿನಾಲ್ಕನೇ ಶತಮಾನದ ಹೊತ್ತಿಗೆ ಶೃಂಗೇರಿ ಶ್ರೀಶಾರದಾಪೀಠವು 'ಜಗದ್ಗುರು ಮಹಾಸಂಸ್ಥಾನ'ವಾಗಿ ಪ್ರಸಿದ್ಧಿ ಪಡೆಯಿತು. ಆದಿಶಂಕರರ ನಂತರ ಅವರಷ್ಟು ವೇದಾಂತ ಗ್ರಂಥಗಳನ್ನು ರಚಿಸಿದವರು ಮತ್ತೊಬ್ಬರಿಲ್ಲ. ಅವರ ಮಾರ್ಗದರ್ಶನದಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯವು ಧರ್ಮ ಸಂರಕ್ಷಣೆಯ ಭದ್ರಕೋಟೆಯಾಗಿ, ವಿಧರ್ಮೀಯರ ಆಕ್ರಮಣಗಳನ್ನು ತಡೆದು, ಅವರಿಗೆ 'ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ' ಎಂಬ ಗೌರವವನ್ನು ತಂದುಕೊಟ್ಟಿತು.

ಇಂದು ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀಭಾರತೀತೀರ್ಥ ಮಹಾಸನ್ನಿಧಾನಂಗಳವರು ಮತ್ತು ಅವರ ಕರಕಮಲ ಸಂಜಾತರಾದ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರ ಮಾರ್ಗದರ್ಶನ ಮತ್ತು ಪ್ರೋತ್ಸಾಹದಿಂದ ಶೃಂಗೇರಿ ಶ್ರೀಶಾರದಾಪೀಠವು ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಗಮನಾರ್ಹವಾದ ಕಾರ್ಯಗಳನ್ನು ಕೈಗೊಳ್ಳುತ್ತಿದೆ. ದೇಶದ ನಾನಾ ಭಾಗಗಳಲ್ಲಿ ವೇದ–ಸಂಸ್ಕೃತ ಪಾಠಶಾಲೆಗಳು ಮಾತ್ರವಲ್ಲ, ಶಾಲಾ–ಕಾಲೇಜುಗಳು, ಆಸ್ಪತ್ರೆಗಳು, ಅಂಗವಿಕಲರಿಗೆ ವಿಶೇಷ ಕೊಡುಗೆಗಳು, ಪ್ರಾಕೃತಿಕ ವಿಕೋಪಕ್ಕೆ ಒಳಗಾದ ಪ್ರದೇಶಗಳಿಗೆ ನೆರವು, ಕುಡಿಯುವ ನೀರಿನ ಯೋಜನೆ, ಕಲ್ಯಾಣಮಂಟಪಗಳು ಧ್ಯಾನಮಂದಿರಗಳು, ಸಾಧನಾಕುಟೀರಗಳು, ಮಾಹಿತಿತಂತ್ರಜ್ಞಾನ ಸೌಕರ್ಯ, ಡಿಜಿಟಲ್‌ಲೈಬ್ರರಿ–ಮೊದಲಾದ ಅನೇಕ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡು, ಈ ಕ್ಷೇತ್ರಗಳಿಗೆ ತನ್ನದೇ ಆದ ಕೊಡುಗೆಗಳನ್ನು ನೀಡುತ್ತಿದೆ.

**ವೇದ–ಶಾಸ್ತ್ರಗಳ ಸಂರಕ್ಷಣೆ**

ವೇದಾಧ್ಯಯನವನ್ನು ಪ್ರೋತ್ಸಾಹಿಸಲು ಶ್ರೀ ಶಾರದಾಪೀಠವು ಭಾರತದಾದ್ಯಂತ ಅನೇಕ ವೇದಪಾಠ ಶಾಲೆಗಳನ್ನು ನಡೆಸುತ್ತಿದೆ. ಈ ಪೀಠದ ಅವಿಚ್ಛಿನ್ನ ಗುರುಪರಂಪರೆಯಲ್ಲಿ ಮುವ್ವತ್ತಮೂರನೆಯವರಾದ ಶ್ರೀ ಸಚ್ಚಿದಾನಂದ ಶಿವಾಭಿನವನೃಸಿಂಹಭಾರತೀ ಮಹಾಸ್ವಾಮಿಗಳವರಿಂದ 1895ರಲ್ಲಿ ಶೃಂಗೇರಿಯಲ್ಲಿ ಸ್ಥಾಪಿತವಾದ ಸದ್ವಿದ್ಯಾಸಂಜೀವಿನೀ ಸಂಸ್ಕೃತ ಮಹಾಪಾಠಶಾಲೆಯು ಇತ್ತೀಚೆಗಷ್ಟೇ ಅಮೃತಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿತು. ಈ ಪಾಠಶಾಲೆಯಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ದೇಶಾದ್ಯಂತ ಮಾತ್ರವಲ್ಲ ಕಡಲಾಚೆಯ ದೇಶಗಳಲ್ಲೂ ವ್ಯಾಪಿಸಿ, ವೇದ–ಶಾಸ್ತ್ರಗಳ ಸಂರಕ್ಷಣೆಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬೆಂಗಳೂರು, ಕಾಲಟಿ, ಸತಾರ, ವಾರಾಣಾಸಿ, ಪ್ರಯಾಗ, ಸಿದ್ಧಾಪುರ, ಶ್ರೀರಂಗಂ, ಕೊಯಮತ್ತೂರು, ತಿರುನಲ್ವೇಲಿ–ಮೊದಲಾದ ಕಡೆ ಇರುವ ಶೃಂಗೇರಿಶಂಕರಮಠಗಳಲ್ಲಿ ಇದೇ ಮಾದರಿಯ ಪಾಠಶಾಲೆಗಳು ತುಂಬ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿವೆ. ಜಗದ್ಗುರು ಮಹಾಸಂಸ್ಥಾನವು ಪಾಲ್ಘಾಟ್, ರಾಜಪಾಳ್ಯಂ–ಮೊದಲಾದ ಕಡೆ ನಡೆಯುತ್ತಿರುವ ಪಾಠಶಾಲೆಗಳಿಗೆ ಎಲ್ಲ ವಿಧದ ಸಹಕಾರ ನೀಡುತ್ತಿದೆ. ಮುಂಬಯಿ, ಚೆನ್ನೈ, ಬೆಂಗಳೂರು, ಮೈಸೂರು, ಹಾಸನ, ಹೈದ್ರಾಬಾದ್, ವಿಜಯವಾಡ–ಮುಂತಾದ ಮಹಾನಗರಗಳಲ್ಲಿರುವ ಶೃಂಗೇರಿ ಶಂಕರ ಮಠಗಳಲ್ಲಿ ವಯಸ್ಕರಿಗೆ ವೇದ–ಶಾಸ್ತ್ರಗಳನ್ನು ಅಧ್ಯಯನ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ.

1990ರಲ್ಲಿ ಜಗದ್ಗುರು ಮಹಾಸ್ವಾಮಿಗಳ ಆಶೀರ್ವಾದದೊಂದಿಗೆ ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಮಡಿಪಾಡು ಎಂಬಲ್ಲಿ ವೇದವೇದಾಂತ ಗುರುಕುಲ ಮಹಾವಿದ್ಯಾಲಯವನ್ನು ಸ್ಥಾಪಿಸಲಾಯಿತು. ಈ ಮಹಾವಿದ್ಯಾಲಯವು ವೇದಾಧ್ಯಯನ, ವೇದಗಳ ಸಂರಕ್ಷಣೆ ಮತ್ತು ವೈದಿಕ ವಿದ್ಯೆಯ ಪ್ರಸಾರದಲ್ಲಿ ನಿರತವಾಗಿದೆ. ಇದು ಭಾರದ್ವಾಜ ವಿದ್ಯಾನಿಲಯ ಎಂಬ ಸಾಂಪ್ರದಾಯಿಕ ಪಾಠಶಾಲೆಯನ್ನು ನಿರ್ವಹಿಸುತ್ತಿದೆ. ಅಲ್ಲದೆ ಸಿದ್ಧಿಪೇಟೆ ರಾಜಮಂಡ್ರಿ– ಮೊದಲಾದ ಕಡೆಗಳಲ್ಲೂ ವೇದ ಪಾಠಶಾಲೆಗಳನ್ನು ನಿರ್ವಹಿಸಲಾಗುತ್ತಿದೆ.


ಪ್ರತಿವರ್ಷ ಶಂಕರಜಯಂತ್ಯುತ್ಸವ ಸಂದರ್ಭದಲ್ಲಿ ಉನ್ನತ ವೇದಪರೀಕ್ಷೆಗಳಲ್ಲಿ ಉತ್ತೀರ್ಣರಾದ ವೈದಿಕವಿದ್ವಾಂಸರು ಭಾಗವಹಿಸಿ, ಜಗದ್ಗುರುಗಳವರ ಸಮ್ಮುಖದಲ್ಲಿ ಗೌರವ– ಸಮ್ಮಾನಗಳನ್ನು ಪಡೆಯುತ್ತಿದ್ದಾರೆ. ಹೆಚ್ಚಾಗಿ ತರುಣವಿದ್ವಾಂಸರು ಈ ಪರೀಕ್ಷೆಗಳಲ್ಲಿ ಪಾಲ್ಗೊಳ್ಳುತ್ತಿರುವುದರಿಂದ ವರ್ಷದಿಂದ ವರ್ಷಕ್ಕೆ ವೇದ ವಿದ್ವಾಂಸರ ಸಂಖ್ಯೆ ಹೆಚ್ಚುತ್ತಿದ್ದು ಅವರೆಲ್ಲರೂ ಶ್ರೀಮಠದ ಗೌರವ–ಸಮ್ಮಾನಕ್ಕೆ ಭಾಜನರಾಗುತ್ತಿದ್ದಾರೆ. ಐದು ದಶಕಗಳ ಹಿಂದೆ ಜಗದ್ಗುರು ಶ್ರೀಮದಭಿನವವಿದ್ಯಾತೀರ್ಥರಿಂದ ಸ್ಥಾಪಿತವಾದ 'ವೇದ ಪೋಷಕ ಸಭಾ'ದ ಆಶ್ರಯದಲ್ಲಿ ಈ ಕಾರ್ಯವು ನಿರಂತರವಾಗಿ ನಡೆದು ಬರುತ್ತಿದೆ.

ಶ್ರೀಮಠವು ಪ್ರತಿವರ್ಷವೂ ದೇಶದ ಬೇರೆ–ಬೇರೆ ಭಾಗಗಳಲ್ಲಿ ವೇದಸಮ್ಮೇಳನಗಳನ್ನು ನಡೆಸಿ, ಆಸ್ತಕರೆಲ್ಲರ ಪ್ರಶಂಸೆಗೆ ಪಾತ್ರವಾಗಿದೆ ಈ ಸಮ್ಮೇಳನಗಳಲ್ಲಿ ವೇದಪಾರಾಯಣ, ಹಿರಿಯ ವೇದವಿದ್ವಾಂಸರಿಗೆ ಸನ್ಮಾನ, ವಿದ್ಯಾರ್ಥಿಗಳಿಗೆ ವೇದಾಧ್ಯಯನ ಮಾಡಲು ಪ್ರೋತ್ಸಾಹ, ವೇದಗಳ ಕುರಿತು ಉಪನ್ಯಾಸ ಮತ್ತು ಪ್ರವಚನ ಇತ್ಯಾದಿಗಳನ್ನು ನಡೆಸಲಾಗುವುದು. ವಾರಾಣಾಸಿ, ನವದೆಹಲಿ, ಕಾಲಟಿ, ಮಹಾರಾಷ್ಟ್ರ, ಕಲ್ಕತ್ತ, ತಮಿಳುನಾಡು, ಕರ್ನಾಟಕ, ಒರಿಸ್ಸಾ, ಜಾರ್ಖಂಡ್, ಹರ್ಯಾನ, ಆಂಧ್ರಪ್ರದೇಶ ತೆಲಂಗಾಣ–ಮೊದಲಾದ ಕಡೆ ಈ ವಾರ್ಷಿಕ ಸಮ್ಮೇಳನಗಳು ನಡೆಯುತ್ತವೆ. ಇತ್ತೀಚಿನ ಬೇರೆ–ಬೇರೆ ರಾಜ್ಯಗಳ ವೇದ ವಿದ್ವಾಂಸರನ್ನು ಒಂದೇ ವೇದಿಕೆಯಲ್ಲಿ ಸೇರಿಸಲು ಯಶಸ್ವಿಯಾಗಿವೆ. ಈ ಸಮ್ಮೇಳನಗಳಲ್ಲಿ ಪ್ರತಿವರ್ಷವೂ ಸುಮಾರು ಎರಡು ಸಾವಿರ ಮಂದಿ ವೇದ ವಿದ್ವಾಂಸರನ್ನು ಮತ್ತು ಒಂದು ಸಾವಿರಕ್ಕೂ ಹೆಚ್ಚು ವೇದ ವಿದ್ಯಾರ್ಥಿಗಳನ್ನು ಗೌರವಿಸಲಾಗುವುದು.

'ವೇದಪಾರಾಯಣಯೋಜನೆ'ಯನ್ವಯ ಶ್ರೀಮಠವು ಪ್ರತಿವರ್ಷ ಪ್ರಸಿದ್ಧ ವೇದ ವಿದ್ವಾಂಸರನ್ನು ವೇದ ಪಾರಾಯಣ ಮಾಡಲು ನಿಯೋಜಿಸುತ್ತದೆ; ಅಲ್ಲದೆ ವಯೋವೃದ್ಧರಾದ ವೇದವಿದ್ವಾಂಸರಿಗೆ ಪ್ರತಿತಿಂಗಳೂ ಗೌರವ ಸಂಭಾವನೆಯನ್ನು ನೀಡಿ, ಪ್ರೋತ್ಸಾಹಿಸಲಾಗುವುದು. ಅವರ ವೈದುಷ್ಯ, ಅನುಭವ ಮತ್ತು ವಯಸ್ಸಿನ ಆಧಾರದ ಮೇಲೆ ತಿಂಗಳಿಗೆ ಸುಮಾರು ರೂ 15000ಗಳ ವರೆಗಿನ ಈ ಗೌರವ ಸಂಭಾವನೆಯನ್ನು ಅವರು ತಮ್ಮ ಮನೆ ಬಾಗಿಲಿನಲ್ಲೇ ಪಡೆಯುವ ವ್ಯವಸ್ಥೆ ಮಾಡಲಾಗಿದೆ.

(ಮುಂದುವರಿಯುವುದು...)


ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



N. Laxmi Prasad



ಕಾರ್ಯಕಾರಿಣಿ ಮಂಡಳಿ ಸದಸ್ಯರು

D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

With Best Compliments From :
Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.


**ವಿಶೇಷ ಮಹಾಸಭೆಯ ನೋಟೀಸು**

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ**

**ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.**

ಮಾನ್ಯ ಸದಸ್ಯ ಬಾಂಧವರೇ, ತಾ.04-03-2018

ನಮ್ಮ ಸಂಘದ ಮೂಲ ನಿಯಮಾವಳಿಗಳ (ಬೈಲಾ) ಪರಿಷ್ಕರಣಾ ವಿಶೇಷ ಮಹಾಸಭೆಯು **ತಾ.18-03-2018ನೇ ರವಿವಾರ ಸಂಜೆ 4-00 ಗಂಟೆಗೆ ಸರಿಯಾಗಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಸಭಾಭವನದಲ್ಲಿ** ನಡೆಯಲಿರುವುದು. ಸಂಘದ ಸದಸ್ಯರಾದ ತಾವೆಲ್ಲರೂ ಈ ವಿಶೇಷ ಮಹಾಸಭೆಯಲ್ಲಿ ಭಾಗವಹಿಸಿ ಸಲಹೆ-ಸೂಚನೆಗಳನ್ನು ನೀಡಿ ಸಂಘದ ನಿಯಮಾವಳಿಗಳ ಪರಿಷ್ಕರಣೆಗೆ ಸಹಕರಿಸಬೇಕಾಗಿ ವಿನಂತಿ.

**ವಿಷಯ ಸೂಚಿ**

1. ಪ್ರಾರ್ಥನೆ
2. ಸ್ವಾಗತ
3. ಪ್ರಸ್ತಾವನೆ-ಅಧ್ಯಕ್ಷರಿಂದ
4. ಸಂಘದ ಮೂಲ ನಿಯಮಾವಳಿಗಳ ಪರಿಷ್ಕರಣೆ
5. ಪರಿಷ್ಕೃತ ನಿಯಮಾವಳಿಗಳ ಅಂಗೀಕಾರ
6. ಧನ್ಯವಾದ ಸಮರ್ಪಣೆ

ಸಹಿ/-
**ಕಾರ್ಯದರ್ಶಿ**

ವಿ.ಸೂ. : ಸಭೆಗೆ ಬರುವಾಗ ತಮಗೆ ಅಂಚೆ ಮೂಲಕ ಕಳುಹಿಸಿದ ನಿಯಮಾವಳಿಗಳ (ಬೈಲಾ) ಪ್ರತಿಯನ್ನು ತರಬೇಕಾಗಿ ವಿನಂತಿ. ಚರ್ಚೆಗೆ ಅನುಕೂಲವಾಗುವುದು.

# ಕಬ್ಬಿನಾಲೆ-ಕುಚ್ಚೂರು ಶತಚಂಡಿಕಾಯಾಗ



ಸುಮಾರು ಐದು ಶತಮಾನಗಳ ಇತಿಹಾಸವಿರುವ ಕಬ್ಬಿನಾಲೆ-ಕುಚ್ಚೂರು ಕುಟುಂಬಸ್ಥರು ಆರಾಧಿಸುತ್ತಿರುವ ಶ್ರೀ ದುರ್ಗಾದೇವಿಯ ಸನ್ನಿಧಿಯಲ್ಲಿ ಭವ್ಯವಾದ ಯಾಗ ಮಂಟಪ ನಿರ್ಮಿಸಿ ಶತಚಂಡಿಕಾ ಯಾಗವನ್ನು ಶಾಸ್ತ್ರೋಕ್ತವಾಗಿ ವಿಜೃಂಭಣೆಯಿಂದ ಪುರೋಹಿತರಾದ ಶ್ರೀ ರಾಮಚಂದ್ರ ಭಟ್‌ರವರ ನೇತೃತ್ವದಲ್ಲಿ, ವೇದಮೂರ್ತಿ ಶ್ರೀ ಸಗ್ರಿ ವೇದವ್ಯಾಸ ಐತಾಳರ ಅಧ್ವರ್ಯದಲ್ಲಿ ಕುಟುಂಬಸ್ಥರ ಅಭ್ಯುದಯಕ್ಕಾಗಿ ನಡೆಯಿತು. ಅನಂತರ ನಡೆದ "ಮಹಾಅನ್ನ ಸಂತರ್ಪಣೆ"ಯಲ್ಲಿ ಸಾವಿರಾರು ಮಂದಿ ಆಮಂತ್ರಿತರು ಭಾಗಿಯಾದರು.

ಕಬ್ಬಿನಾಲೆಯಂತಹ ಕಡಿದಾದ-ಗುಡ್ಡಕಾಡು ಪ್ರದೇಶದ ಕುಚ್ಚೂರಿಗೆ ರಸ್ತೆ ದುರಸ್ತಿಗೊಳಿಸಿ, ವಾಹನ ಸೌಕರ್ಯ ಒದಗಿಸಿ ಅತಿಥಿ-ಅಭ್ಯಾಗತರನ್ನು ಕರೆಸಿ, ನೆನಪಿನಲ್ಲಿ ಉಳಿಯುವಂತೆ ಶ್ರೀದೇವಿಯ ಕೈಂಕರ್ಯ ಮಾಡಿದ ಕಬ್ಬಿನಾಲೆ-ಕುಚ್ಚೂರು ಕುಟುಂಬಸ್ಥರನ್ನು ಭಾಗವಹಿಸಿದ 'ವೈದಿಕ



ತಾ.05.02.2018ರಿಂದ 09.02.2018 ರತನಕ ನೆರವೇರಿಸಲಾಯಿತು. ಈ ಮಹಾಯಾಗವನ್ನು ಸಮಸ್ತ ಕುಟುಂಬಸ್ಥರು, ಬಂಧು-ಬಾಂಧವರು ಹಾಗೂ ಪಾಲ್ಗೊಂಡ ಊರ-ಪರಊರಿನ ಸಾವಿರಾರು ಭಕ್ತಾಧಿಗಳು, ತಾ 09.02.2018 ನೇ ಶುಕ್ರವಾರ ಬೆಳಗ್ಗೆ ಘಂಟೆ 10.30 ರ ಸುಮುಹೂರ್ತದಲ್ಲಿ, ಸಂಪನ್ನಗೊಂಡ ಯಾಗದ "ಪೂರ್ಣಾಹುತಿ" ವೀಕ್ಷಿಸಿ ಧನ್ಯರಾದರು. ಹಿಂದಿನ ದಿನ ಯಾಗಕ್ಕೆ ಬೇಕಾದ "ಅಗ್ನಿಪ್ರಜ್ವಲನ'ವೆಂಬ ಅರಣಿ ಮಥನ' ಕ್ರಿಯೆ ಹಾಗೂ ತಾ. 06-02-2018 ರಂದು ಬೃಹತ್ ಮಂಡಲದಲ್ಲಿ 'ಶ್ರೀ ಚಕ್ರ ಪೂಜೆಗಳು' ವೀಕ್ಷಿಸಿದವರ ಮನದಲ್ಲಿ ಅಚ್ಚಳಿಯದೆ ನೆಲೆಸಿರಬಹುದು ಎಂದರೆ ಅತಿಶಯೋಕ್ತಿಯಾಗಲಾರದು, ಯಾಗದ ಪೂರ್ಣಾಹುತಿ ನಂತರ ಸುಹಾಸಿನಿ ಪೂಜೆ-ದಂಪತಿ ಪೂಜೆ-ಆಚಾರ್ಯಪೂಜೆ-ಮಹಾಮಂತ್ರಾಕ್ಷತೆ ವೃಂದ' ಹಾಗೂ ನೆರೆದ ಜನಸ್ತೋಮ ಮನಸಾರೆ ಹರಸಿತು. ಅಂತಿಮವಾಗಿ ತಾ.09.02.2018ರ ಸಂಜೆ ಮನರಂಜನಾ ಕಾರ್ಯಕ್ರಮದ ಅಂಗವಾಗಿ 'ಕವಿರತ್ನ ಕಾಳಿದಾಸ' ಎಂಬ ಯಕ್ಷಗಾನ ಪ್ರಸಂಗವನ್ನು ಅಂಬಲಪಾಡಿ ಲಕ್ಷ್ಮೀಜನಾರ್ಧನ ಯಕ್ಷಗಾನ ಮಂಡಳಿಯವರು ಬಯಲಾಟವಾಡಿ ವೀಕ್ಷಕರ ಮನಸೂರೆಗೊಂಡರು ರಾತ್ರಿ ಕುಟುಂಬಸ್ಥರ ಮನೆದೈವಕ್ಕೆ ಹರಕೆ 'ನರ್ತನ ಸೇವೆ"ಯೊಂದಿಗೆ ಕಾರ್ಯಕ್ರಮಗಳಿಗೆ ಮಂಗಳ ಹಾಡಲಾಯಿತು. ಈ ಕಾರ್ಯಕ್ರಮದ ರೂವಾರಿಗಳಾದ ಶ್ರೀ ಮಂಜುನಾಥ ಹೆಬ್ಬಾರ್ (ಹೆಬ್ಬಾರ್ ಕೇಟರರ್ಸ್, ಉಡುಪಿ) ಮತ್ತು ಶ್ರೀ ಗಣೇಶ ಹೆಬ್ಬಾರ್, ಅಂಬಲಪಾಡಿ (ಲೆಕ್ಕ ಪರಿಶೋಧಕರು, ಉಡುಪಿ) ಇವರಿಗೆ ಕುಚ್ಚೂರು ಕುಟುಂಬಸ್ಥರು ಆಭಾರಿಗಳಾಗಿದ್ದಾರೆ.

**ವರದಿ: ಜೆ.ಕೆ ಕೋಲ್ಪೆ.**

# ಸಾಹಿತಿ ಸಾವಿತ್ರಿ ಮನೋಹರ್‌ಗೆ ಮಹಿಳಾ ರತ್ನ ಪ್ರಶಸ್ತಿ



ಹತ್ತು ಹಲವು ಸಂಘಸಂಸ್ಥೆಗಳಲ್ಲಿ ಸಕ್ರಿಯ ಕಾರ್ಯಕರ್ತೆಯಾಗಿ ಮೂರು ದಶಕಗಳಿಂದ ದುಡಿಯುತ್ತಿರುವ ಶ್ರೀಮತಿ ಸಾವಿತ್ರಿ ಮನೋಹರರಿಗೆ ಅವರ ಅಮೂಲ್ಯ ಸೇವೆಯನ್ನು ಗುರುತಿಸಿ ಗೌರವಿಸಲು ಸಂತೋಷವಾಗುತ್ತಿದೆ. ಸಾಹಿತ್ಯ-ಶಿಕ್ಷಣ ಕ್ಷೇತ್ರದ ಜೀವಮಾನ ಸಾಧನೆಗಾಗಿ 9ನೇ ಅಖಿಲ ಕರ್ನಾಟಕ ಬೆಳದಿಂಗಳ ಸಾಹಿತ್ಯ ಸಮ್ಮೇಳನದಲ್ಲಿ ರಾಜ್ಯಮಟ್ಟದ ಗೌರವ ಪುರಸ್ಕಾರವಾಗಿ **"ಕರ್ನಾಟಕ ಮಹಿಳಾ ರತ್ನ"** ಪ್ರಶಸ್ತಿ ನೀಡಿ ಗೌರವಿಸುತ್ತಿದ್ದೇವೆ ಎಂದು ಸಮ್ಮೇಳನಾಧ್ಯಕ್ಷ ಶ್ರೀ ಬನ್ನಂಜೆ ಬಾಬು ಅಮೀನ್ ನುಡಿದರು.

ಆಳ್ವಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ। ಎಂ. ಮೋಹನ್ ಆಳ್ವರು ಶ್ರೀಮತಿ ಸಾವಿತ್ರಿ ಮನೋಹರ್‌ರಿಗೆ ಕರ್ನಾಟಕ ಮಹಿಳಾ ರತ್ನ ಪ್ರಶಸ್ತಿಪತ್ರ ನೀಡಿ ಶಾಲು, ಹಾರ, ಫಲ ತಾಂಬೂಲ, ಸ್ಮರಣಿಕೆಯನ್ನಿತ್ತು ಸನ್ಮಾನಿಸಿದರು. ಬೆಳದಿಂಗಳ ಸಾಹಿತ್ಯ ಸಮ್ಮೇಳನ ಸಮಿತಿ ಅಧ್ಯಕ್ಷ ಶ್ರೀ ಶೇಖರ ಅಜೆಕಾರು ಸನ್ಮಾನಿತರ ಪರಿಚಯವಿತ್ತು ಸನ್ಮಾನಪತ್ರ ವಾಚಿಸಿದರು.

# ಕುಂಜಿಬೆಟ್ಟಿನ ಶ್ರೀ ಶಾರದೆಗೆ ಆಭರಣ ಸಮರ್ಪಣೆ



ನಮ್ಮ ಸಂಘದ ಕೋಶಾಧಿಕಾರಿಗಳಾದ ಶ್ರೀ ಕೆ.ಸುಧಾಕರ ರಾವ್ ಹಾಗೂ ಶ್ರೀಮತಿ ಜ್ಯೋತಿ ಸುಧಾಕರ್ ರಾವ್ ದಂಪತಿಗಳು ಶ್ರೀಶಾರದೆಗೆ ಸುಮಾರು ಹದಿನೈದು ಸಾವಿರ ರೂಪಾಯಿ ಮೌಲ್ಯದ ಬೆಳ್ಳಿಯ ಸರ ಹಾಗೂ ಬೆಳ್ಳಿಯ ಹರಿವಾಣಗಳನ್ನು ಸಮರ್ಪಿಸಿದರು. ಶ್ರೀ ಸುಧಾಕರ ರಾಯರು ಕಾಪುವಿನ ಶ್ರೀ ಮೋಹನ್ ರಾವ್ ಹಾಗೂ ಶ್ರೀಮತಿ ರಮಾ ದಂಪತಿಗಳ ಪುತ್ರ. ಎಲ್.ಐ.ಸಿ.ಯಲ್ಲಿ ಡಿವಿಶನಲ್ ಮೆನೆಜರ್ ಹುದ್ದೆಯಿಂದ ನಿವೃತ್ತರು. ಇವರ ಪತ್ನಿ ಶ್ರೀಮತಿ ಜ್ಯೋತಿ ರಾವ್‌ರವರು ಶ್ರೀ ಪರೀಕ ದೇವರಾವ್ ಹಾಗೂ ಶ್ರೀಮತಿ ಇಂದಿರಾರವರ ಪುತ್ರಿ. ಮಗ ಶ್ರೀ ಸಂಜಯ್, ಇಂಜಿನಿಯರ್ ಆಗಿ ಅಮೇರಿಕಾದಲ್ಲಿ ನೆಲೆಸಿದ್ದು ಮಗಳು ಶ್ರೀಮತಿ ಸೀಮಾ ಜಯಂತ್ ರಾಜ್ ಎಂ.ಸಿ.ಎ ಪದವೀಧರೆ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಒಟ್ಟು ಮೂರು ಮೊಮ್ಮಕ್ಕಳೊಂದಿಗೆ ಶ್ರೀ ಶಾರದಾ ದೇವಸ್ಥಾನದ ಬಳಿಯೇ ಸ್ವಂತ ನಿವಾಸದಲ್ಲಿ ಸಂತೃಪ್ತ ಜೀವನ ನಡೆಸುತ್ತಿರುವ ಶ್ರೀ ಸುಧಾಕರ ರಾವ್ ದಂಪತಿಗಳಿಗೆ ಶ್ರೀ ಶಾರದೆಯ ರಕ್ಷೆ ಸದಾ ಇರಲಿ ಎಂದು ಆಡಳಿತ ಮಂಡಳಿ ಹಾರೈಸುತ್ತದೆ.

ಶ್ರೀಶಾರದೆಯ ಇನ್ನೋರ್ವ ಭಕ್ತರಾದ ಶ್ರೀಮತಿ ನಮಿತಾ ಉಮೇಶ್‌ರವರು ದೇವಿಗೆ ಬಂಗಾರದ ಮೂಗುತಿಯನ್ನು ಸಮರ್ಪಿಸಿದ್ದಾರೆ. ಇವರ ಕುಟುಂಬಕ್ಕೆ ಶ್ರೀಶಾರದೆಯ ಕೃಪಾಕಟಾಕ್ಷ ಸದಾಕಾಲ ಇರಲೆಂದು ಆಡಳಿತ ಮಂಡಳಿಯು ಪ್ರಾರ್ಥಿಸುತ್ತದೆ.

**ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-30**

# ಶ್ರೀ ಭಗವತೀ ದುರ್ಗಾಪರಮೇಶ್ವರಿ ದೇವಸ್ಥಾನ, ಕೆರ್ಗಾಲು, ಬೈಂದೂರು ತಾಲೂಕು



ಕುಂದಾಪುರದಿಂದ ಬೈಂದೂರಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಬೈಂದೂರಿಗಿಂತ ಐದು ಕಿಲೋಮೀಟರ್ ಮೊದಲು ಪಶ್ಚಿಮ ದಿಕ್ಕಿನಲ್ಲಿ ಹೆದ್ದಾರಿಯಿಂದ ಭಗವತೀ ರಸ್ತೆಯೆಂದೇ ಹೆಸರಾಗಿರುವ ಅಡ್ಡ ರಸ್ತೆ ಸಿಗುತ್ತದೆ ಈ ರಸ್ತೆಯಲ್ಲಿ ಸುಮಾರು 2-3 ಫರ್ಲಾಂಗು ದೂರ ಕ್ರಮಿಸಿದಾಗ ಸಿಗುವ ಪುಟ್ಟ ಗ್ರಾಮವೇ ಕೆರ್ಗಾಲು. ಈ ಪ್ರದೇಶದಲ್ಲಿ ಹೆದ್ದಾರಿಯ ಇಕ್ಕೆಲಗಳಲ್ಲಿರುವ ಸಣ್ಣ ಪುಣ್ಣ ಗ್ರಾಮಗಳಲ್ಲಿ ನಮ್ಮವರ ಅನೇಕ ಕೃಷಿಕ ಕುಟುಂಬಗಳಿವೆ. ಇಂತಹಾ ಒಂದು ಕುಟುಂಬವಾದ ಭಗವತೀ ಕುಟುಂಬವೆಂದೇ ಹೆಸರುವಾಸಿಯಾದ ಶ್ರೀ ಸುಬ್ರಾಯ ನಾರಾಯಣ ಶಾನುಭಾಗ್‌ರವರ ಕುಟುಂಬದ ಆಡಳಿತದಲ್ಲಿ ಸುಮಾರು 800 ಶತಮಾನಗಳಿಂದ ಇರುವ ದೇವಸ್ಥಾನ ಶ್ರೀ ಭಗವತೀ ದುರ್ಗಾಪರಮೇಶ್ವರಿ ದೇವಸ್ಥಾನ.

ಈ ದೇವಸ್ಥಾನ ಎಷ್ಟು ಹಳೆಯದು ಎಂಬುದಕ್ಕೆ ಅಲ್ಲಿ ಸಿಕ್ಕ 12ನೆಯ ಶತಮಾನದ ಶಿಲಾಶಾಸನವೇ ಆಧಾರ. ಆ ಶಿಲಾಶಾಸನದಲ್ಲಿ ತ್ರಿಮೂರ್ತಿ/ತ್ರಿಶಕ್ತಿ ದೇವರುಗಳಿಗೆ ಉಂಬಳಿ ಬಿಟ್ಟ ಬಗ್ಗೆ ಉಲ್ಲೇಖವಿದೆ. ಹಾಗಾಗಿ 12ನೆಯ ಶತಮಾನದಿಂದಲೂ ಈ ಸ್ಥಳದಲ್ಲಿ ದೇವಸ್ಥಾನವೊಂದು ಇದ್ದದ್ದಕ್ಕೆ ಇದು ಸಾಕ್ಷಿಯಾಗಿದೆ. ಶಿಲಾಶಾಸನದಲ್ಲಿ ಉಲ್ಲೇಖಿಸಿದ ತ್ರಿಮೂರ್ತಿ/ತ್ರಿಶಕ್ತಿ ದೇವರುಗಳೇ ಶಕ್ತಿಗಳಾದ ಮಹಾಲಕ್ಷ್ಮೀ, ಮಹಾಕಾಳಿ ಮತ್ತು ಸರಸ್ವತಿ ಎಂದು ಊರವರು ನಂಬುತ್ತಾರೆ. ಮುಳಿಹುಲ್ಲಿನ ಮಾಡಿನ ದೇವಾಲಯವು ಹಲವಾರು ಬಾರಿ ಜೀರ್ಣೋದ್ಧಾರ ಕಂಡಿರುವುದರಿಂದ ಮೂರ್ತಿಯೊಂದನ್ನುಳಿದು ಉಳಿದ ಕಟ್ಟಡದಲ್ಲಿ ಇತಿಹಾಸದ ಬೇರೆ ಕುರುಹುಗಳಿಲ್ಲ.

ಈ ಆಗಮೋಕ್ತ ದೇವಳದಲ್ಲಿ ದೇವಿಯು ಲಿಂಗರೂಪಿಯಾಗಿ ಆರಾಧಿಸಲ್ಪಡುತ್ತಿದ್ದಾಳೆ. ಅಗಸ್ತ್ಯಮುನಿ ಪ್ರತಿಷ್ಠಾಪಿತ ಲಿಂಗವೆಂದು ಪ್ರತೀತಿ. ಇತ್ತೀಚೆಗೆ ಜೀರ್ಣೋದ್ಧಾರದ ಸಮಯದಲ್ಲಿ ಲಿಂಗದ ಹಿಂದೆ ಅಲಂಕಾರ ಮೂರ್ತಿಯಾಗಿ ಅಷ್ಟಭುಜ ಭಗವತಿ ದುರ್ಗಾಪರಮೇಶ್ವರಿಯ ವಿಗ್ರಹವನ್ನು ನಿಲ್ಲಿಸಿದ್ದಾರೆ. ಪ್ರಸಕ್ತ ಗರ್ಭಗುಡಿ ಮುರಕಲ್ಲಿನದ್ದು ಪೂರ್ವದಿಕ್ಕಿಗೆ ಮುಖ ಮಾಡಿದೆ. ತಾಮ್ರದ ಮಾಡು ತೀರ್ಥಮಂಟಪ ಇದೆ. ದೇವಳದ ಸುತ್ತ ಆವರಣ ಗೋಡೆಯಿದೆ. ದೇವಳದ ಎದುರು ಪುಷ್ಕರಣಿ ಇರುವುದು ಒಂದು ಕಾಲದಲ್ಲಿ ಇದು ಪ್ರಸಿದ್ಧ ದೇವಸ್ಥಾನವಾಗಿರುವುದನ್ನು ಸೂಚಿಸುತ್ತದೆ. ಉಪದೇವರಾದ ವೀರಭದ್ರನಿಗೆ ಶಿಲಾಮಯವಾದ ಪ್ರತ್ಯೇಕ ಗುಡಿಯಿದೆ. ಅಶ್ವತ್ಥ ಕಟ್ಟೆ, ನಾಗದೇವರ ಸನ್ನಿಧಾನವಿದೆ. ಲಿಂಗದ ಪಾಣಿಪೀಠದಿಂದ ನಾಗದೇವರ ಸನ್ನಿಧಾನಕ್ಕೆ ಸುರಂಗಮಾರ್ಗವಿದೆಯಂತೆ. ಯಕ್ಷ, ಮಲೆಯಾಳಿ ಜಟ್ಟಿಗ, ಭಗವತೀ ಮರ್ಲುಚಿಕ್ಕು ಇತ್ಯಾದಿ ಪರಿವಾರದೈವಗಳಿವೆ.

ಹಿಂದೆ ಪಾದಯಾತ್ರೆಯಲ್ಲಿ ಕೊಲ್ಲೂರಿಗೆ ಭೇಟಿಯಿಡುತ್ತಿದ್ದಾಗ ಕೊಲ್ಲೂರು ದುರ್ಗಾಪರಮೇಶ್ವರಿಯ ದರ್ಶನಗೈದವರು ಈ ದೇವಸ್ಥಾನಕ್ಕೆ ಭೇಟಿಯಿತ್ತಲ್ಲಿ ಮಾತ್ರ ಫಲ ಪ್ರಾಪ್ತಿಯೆಂಬ ನಂಬಿಕೆ ಇತ್ತಂತೆ. ಇಲ್ಲಿ ನವರಾತ್ರಿ ಉತ್ಸವ ವಿಶೇಷ. ಭಗವತೀ ಮರ್ಲುಚಿಕ್ಕು ದೈವಕ್ಕೆ ಢಕ್ಕೆ ಬಲಿ ಪ್ರತೀ ವರ್ಷ ಮಕರ ಸಂಕ್ರಾಂತಿ ಕಳೆದು 13ನೇ ದಿನ ನಡೆಯುತ್ತದೆ. ಧರ್ಮಸ್ಥಳದಲ್ಲಿ ದೀಪದ ಅಮವಾಸ್ಯೆ ಆಚರಿಸುವ ದಿನದಂದು ಇಲ್ಲೂ ದೀಪದ ಅಮವಾಸ್ಯೆ ಆಚರಿಸುತ್ತಾರೆ. ನಿತ್ಯಪೂಜೆ, ಚಂಡಿಕಾಯಾಗ, ದುರ್ಗಾನಮಸ್ಕಾರ, ಇತ್ಯಾದಿ ಸೇವೆಗಳು ಜರಗುತ್ತವೆ. ಸೋಣಾರತಿ ಇಲ್ಲಿ ವಿಶೇಷ.



ಪ್ರಸಕ್ತ ಶ್ರೀ ಸುಬ್ರಾಯ ನಾರಾಯಣ ಶ್ಯಾನುಭಾಗರು ಈ ದೇವಸ್ಥಾನದ ಅನುವಂಶಿಕ ಮೊಕ್ತೇಸರರಾಗಿದ್ದಾರೆ. ಈ ದೇವಸ್ಥಾನವು ಮುಜರಾಯಿ ಇಲಾಖೆಗೆ ಸೇರಿದೆ. ನಿತ್ಯಪೂಜೆಗೆ ಹಾಗೂ ತಂತ್ರಿಗಳಾಗಿ ಶ್ರೀ ಸೋಮಯಾಜಿ ಹಾಗೂ ಶ್ರೀ ಮಧ್ಯಸ್ಥರು ಸೇವೆ ಸಲ್ಲಿಸುತ್ತಿದ್ದಾರೆ. ದೇವಾಲಯದ ಸಮಗ್ರ ಜೀರ್ಣೋದ್ಧಾರಕ್ಕಾಗಿ ಮೂರೂವರೆ ಕೋಟಿ ರೂಪಾಯಿಗಳ ನೀಲನಕ್ಷೆ ತಯಾರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಶ್ರೀ ಸುಬ್ರಾಯ ಶ್ಯಾನುಭಾಗರನ್ನು 9448428720ದಲ್ಲಿ ಸಂಪರ್ಕಿಸಬಹುದು.

# ಶಾರದೆಯ ಅಂಗಣದಲ್ಲಿ ರಿಂಗಣಿಸಿದ ಆದಿಮಾಯೆಯ ಮಹಾಕಥನ





ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದ ಎದುರು ಹಾಕಿದ್ದ ವಿಶೇಷ ಪುಷ್ಪಾಲಂಕೃತ ರಂಗಮಂಟಪದಲ್ಲಿ ಕಟೀಲು ಶ್ರೀ ದುರ್ಗಾಪರಮೇಶ್ವರೀ ಪ್ರಸಾದಿತ ದಶಾವತಾರ ಯಕ್ಷಗಾನ ಮಂಡಳಿಯ 4ನೇ ಮೇಳದ ಪ್ರಸಿದ್ಧ ಕಲಾವಿದರಿಂದ ಸಂಪೂರ್ಣ ಶ್ರೀ ದೇವೀ ಮಹಾತ್ಮೆ ಪೌರಾಣಿಕ ಯಕ್ಷಗಾನ ಬಯಲಾಟವು ಫೆಬ್ರವರಿ 19 ರಂದು ಸೋಮವಾರ ರಾತ್ರಿ ಸಂಪನ್ನಗೊಂಡಿತು.

ಭವ್ಯವಾದ ರಂಗಮಂಟಪ, ಪರಿಪೂರ್ಣವಾದ ಹಿಮ್ಮೇಳ ಮುಮ್ಮೇಳಗಳ ಸಂಪನ್ನತೆ, ಸುಸಜ್ಜಿತ ವೇಷಭೂಷಣಗಳು ಕಥಾನಕದ ಅಪೂರ್ವ ಸನ್ನಿವೇಶಗಳಿಗೆ ಮೆರಗು ನೀಡಿದರೆ, ವಿಶೇಷ ಸಂದರ್ಭದಲ್ಲಿ ಜತೆ ನೀಡಿದ ಬ್ಯಾಂಡ್-ವಾಲಗ ವಾದನ ಮತ್ತು ಸಿಡಿಮದ್ದುಗಳ ಭರಾಟೆ ಶ್ರೀದೇವೀ ಮಹಾತ್ಮೆಯ ಭವ್ಯತೆಗೆ ದಿವ್ಯಧ್ವನಿ ನೀಡಿದ್ದವು. ಸಭಾಲಕ್ಷಣ ಬಾಲಗೋಪಾಲರು, ಸುಂದರ ಸ್ತ್ರೀ ವೇಷ ಕುಣಿತ ಪ್ರೇಕ್ಷಕರ ಕಣ್ಮನ ಸೆಳೆದರೆ, ಆದಿ ಮಾಯೆಯಿಂದ ತ್ರಿಮೂರ್ತಿಗಳ ಸೃಷ್ಟಿಯೊಂದಿಗೆ ಆರಂಭವಾಗಿ ಮಹಿಷಾಸುರ ವಧೆಯಲ್ಲಿ ಪರಾಕಾಷ್ಠೆಗೇರಿ ಚಂಡ ಮುಂಡರ ವಧೆ, ರಕ್ತ ಬೀಜಾಸುರ, ಶುಂಭನಿಶುಂಭ ಸಂಹಾರ ಸಂದರ್ಭಗಳಲ್ಲಿ ಭವ್ಯತೆಯ ಉತ್ತುಂಗಕ್ಕೇರಿ ಬೆಳಗ್ಗಿನವರೆಗೆ ನೆರೆದಿದ್ದ ಭಕ್ತಪರವಶ ಪ್ರೇಕ್ಷಕ ವೃಂದವನ್ನು ತನ್ಮಯಗೊಳಿಸಿ ಅತ್ಯಂತ ಯಶಸ್ವಿಯಾಯಿತು. ಭಾಗವತರಾಗಿ ಖ್ಯಾತಿವೆತ್ತ ಸತೀಶ ಪಟ್ಲ ಅವರ ಹಾಡುಗಳಿಗೆ ಅಭಿಮಾನಿಗಳು ತಲೆದೂಗಿ ಸಂಭ್ರಮಿಸಿದರು. ಚಂಡೆ-ಮದ್ದಳೆ ವಾದನ ಶಾಸ್ತ್ರೀಯವಾಗಿ ಸುಶ್ರಾವ್ಯವಾಗಿತ್ತು.

ಜಗನ್ಮಾತೆ, ಮಹಿಷಾಸುರ, ಮಾಲಿನಿ, ಚಂಡ-ಮುಂಡಾಸುರರು, ರಕ್ತಬೀಜಾಸುರ, ಶುಂಭ ನಿಶುಂಭ ಪಾತ್ರಧಾರಿಗಳು ತಮ್ಮ ಅಪೂರ್ವ ಅಭಿನಯದಿಂದ ಪ್ರೇಕ್ಷಕರನ್ನು ರಂಜಿಸಿದರು. ಸಿಂಹನೃತ್ಯವೂ ಎಲ್ಲರ ಗಮನ ಸೆಳೆಯಿತು.

ಕಟೀಲು ಮೇಳದ ದೇವರ ಪೂಜೆಗೆ ಶ್ರೀ ಶಾರದಾ ದೇಗುಲ ಸಂಕೀರ್ಣದ ಜ್ಞಾನ ಮಂದಿರದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ರಾತ್ರಿ ಪೂಜೆಯ ನಂತರ ಪ್ರಸಾದ ವಿತರಣೆ ನಡೆಯಿತು.

ಚೌಕಿಯಲ್ಲಿ ಗಣಪತಿ ಪೂಜೆಯಾದ ನಂತರ ಶಾರದಾ ಮಂಟಪದಲ್ಲಿ ಏರ್ಪಡಿಸಲಾಗಿದ್ದ ಅನ್ನಸಂತರ್ಪಣೆಯಲ್ಲಿ ಸುಮಾರು 700ಕ್ಕೂ ಮಿಕ್ಕಿ ಭಕ್ತಾಧಿಗಳು ಪಾಲ್ಗೊಂಡರು.

ಹರಕೆ ಬಯಲಾಟವನ್ನು ಆಡಿಸಿದ ಶ್ರೀ ಬಿ. ಜಯರಾಮ ರಾವ್, ಶ್ರೀಮತಿ ವೀಣಾ ಜಯರಾಮ ರಾವ್, ಮಕ್ಕಳು ಮತ್ತು ಬಂಧು ಬಳಗದವರು ಕಳೆದ ವರ್ಷವೂ ಇಲ್ಲಿಯೇ ಶ್ರೀದೇವಿ ಮಹಾತ್ಮೆ ಬಯಲಾಟವನ್ನು ಏರ್ಪಡಿಸಿದ್ದರು. ಮಧ್ಯದಲ್ಲಿ ಧಾರಾಕಾರ ಮಳೆ ಸುರಿದ ಕಾರಣ ಅತೃಪ್ತಿಗೊಂಡು ಮತ್ತೆ ಈ ಭಾರಿ ಏರ್ಪಡಿಸಿದ ಬಯಲಾಟ ಅತ್ಯಂತ ಯಶಸ್ವಿಯಾಗಿ ಪ್ರದರ್ಶನಗೊಂಡಿತು.

ಕಟೀಲು ದೇವಸ್ಥಾನದ ಆಡಳಿತ ಮಂಡಳಿ, ಮೇಳದ ವ್ಯವಸ್ಥಾಪಕರು, ಸಮಸ್ತ ಕಲಾವಿದರಿಗೆ ಹಾಗೂ ಸಹಕರಿಸಿದ ಎಲ್ಲರಿಗೆ ಜಯರಾಮ ರಾವ್ ದಂಪತಿಗಳು ಕೃತಜ್ಞತೆ ಸಲ್ಲಿಸಿದ್ದಾರೆ. ಚಂಡೆ-ಮದ್ದಳೆ ವಾದನದಲ್ಲಿ ಅತಿಥಿ ಕಲಾವಿದರಾಗಿ ನಮ್ಮವರೇ ಆದ ಶ್ರೀ ಬೆಳುವಾಯಿ ದೇವಾನಂದ ಭಟ್ಟರು ಭಾಗವಹಿಸಿ ವಿಶೇಷವಾಗಿ ಸಹಕರಿಸಿದರು. ಶ್ರೀಶಾರದಾ ಕಲ್ಯಾಣ ಮಂಟಪದ ಮ್ಯಾನೇಜರ್ ಆದ ಶ್ರೀ ಅಜಿತ್ ರಾವ್‌ರವರು ಯಕ್ಷಗಾನ ಬಯಲಾಟ ಸಂಪನ್ನಗೊಳ್ಳಲು ಸಹಕರಿಸಿದರು.

**ವರದಿ: ಕೆ. ವೇಣುಗೋಪಾಲರಾವ್**

## ವಿ| ಡಾ| ಚೈತ್ರ ರಾವ್ ಪೆರ್ಣಂಕಿಲ ಇವರ ಭರತನಾಟ್ಯ ಪ್ರದರ್ಶನ



ನಂದನಾ ಪ್ರದರ್ಶನ ಕಲೆಗಳ ಕೇಂದ್ರ (ರಿ). ಮೈಸೂರು ಆಯೋಜಿಸಿದ ವಿದ್ವತ್ಸಮರ-2018 ಇದರ ನಾಟ್ಯೋತ್ಸವದಲ್ಲಿ ತಾ.22-02-2018ರಂದು ವಿದುಷಿ ಡಾ| ಚೈತ್ರ ರಾವ್ ಪೆರ್ಣಂಕಿಲ ಇವರು ನಾದಬ್ರಹ್ಮ ಸಂಗೀತ ಸಭಾದಲ್ಲಿ ತಮ್ಮ ಭರತನಾಟ್ಯ ಪ್ರದರ್ಶನವನ್ನು ನೀಡಿರುವರು. ಪ್ರಥಮವಾಗಿ ತನ್ನ ಗುರುಗಳು ನಿರ್ದೇಶಿಸಿರುವ ಪುಷ್ಪಾಂಜಲಿಯೊಂದಿಗೆ ಪ್ರಾರಂಭಿಸಿ ನಂತರದಲ್ಲಿ ಡಾ| ಜಾನಕೀರಂಗರಾಜನ್, ಚೆನ್ನೈ ಅವರು ನಿರ್ದೇಶಿಸಿದ ಪದವರ್ಣದಲ್ಲಿ ತನ್ನ ಅತ್ಯುತ್ತಮವಾದ ಅಂಗಶುದ್ಧಿಯೊಂದಿಗೆ ಪ್ರೌಢ ಅಭಿನಯವನ್ನು ನೀಡಿ ಸಭಿಕರ ಮನವನ್ನು ಮುದಗೊಳಿಸಿದರು. ಕೊನೆಯದಾಗಿ ಶ್ರೀಮತಿ ಮೀನಾಕ್ಷಿ ಶ್ರೀನಿವಾಸನ್ ಚೆನ್ನೈ ಅವರು ನಿರ್ದೇಶಿಸಿದ ಪದಂವನ್ನು ಪ್ರಸ್ತುತ ಪಡಿಸಿದರು.

ಸಭೆಯಲ್ಲಿ ಡಾ| ಚೈತ್ರ ರಾವ್ ಅವರ ನೃತ್ಯಗುರುಗಳಾದ ವಿ| ಡಾ| ಚೇತನಾ ರಾಧಾಕೃಷ್ಣ ಮತ್ತು ನಂದನಾ ಪ್ರದರ್ಶನ ಕಲೆಗಳ ಕೇಂದ್ರ, ಇದರ ನಿರ್ದೇಶಕಿ ವಿದುಷಿ ಶ್ರೀಮತಿ ಎಂ.ಎಲ್. ವಾರಿಜಾ ನಲಿಗೆ ಇವರು ಉಪಸ್ಥಿತರಿದ್ದರು. ಡಾ| ಚೈತ್ರ ರಾವ್ ಇವರು ಶ್ರೀಮತಿ ಆಶಾಲತ ಪಿ.(ಬಿ.ಎಸ್.ಎನ್.ಎಲ್. ಮಣಿಪಾಲ) ಮತ್ತು ಶ್ರೀ ಶ್ರೀನಿವಾಸ ರಾವ್ ಪೆರ್ಣಂಕಿಲ (ಎಸ್‌ಬಿಐ, ನಿವೃತ್ತ). ಇವರುಗಳ ಸುಪುತ್ರಿ. ಡಾ| ಚೈತ್ರ ರಾವ್ ಇವರು ಪ್ರಸ್ತುತ ಶ್ರೀ ಧರ್ಮಸ್ಥಳ ಆರ್ಯುವೇದ ಕಾಲೇಜ್ ಉಡುಪಿ ಇಲ್ಲಿ ಎಮ್.ಡಿ ಸ್ನಾತಕೋತ್ತರ ಪದವಿಯ ಅಧ್ಯಯನ ಮಾಡುತ್ತಿದ್ದಾರೆ.



ತಾರೀಕು 26-01-2018 ರಂದು ಉಡುಪಿ ಮಿತ್ರವೃಂದದವರು ಜಂಬೂರು ಶ್ರೀ ರಾಮಚಂದ್ರ ಶ್ಯಾನುಭಾಗ್ ದಂಪತಿಗಳಿಗೆ ಅವರ ಸ್ವಗೃಹದಲ್ಲಿ ಸನ್ಮಾನಿಸಿದ ಸಂದರ್ಭ...


**With Best Compliments From :**




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+


Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org